# ಪರಿಕಲ್ಪನ

## ೨

## ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ




**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ

# ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಯ ಪಾತ್ರ

## ಆಡಳಿತಾತ್ಮಕ



- ಸಧಸ್ಯತ್ವದ ದಾಖಲಾತಿ ಮತ್ತು ರದ್ದತಿ
- ಪದಾಧಿಕಾರಿಗಳ ಆಯ್ಕೆ ಮತ್ತೆ ತೆಗೆದು ಹಾಕುವುದು
- ನೀತಿ ಮತ್ತು ಯೋಜನೆಗಳ ನಿರೂಪಣೆ
- ಅವಶ್ಯಕತೆಗೆ ಅನುಗುಣವಾಗಿ ಉಪಸಮೀತಿಗಳ ರಚನೆ
- ಸಿಬ್ಬಂದಿಗಳ ನೇಮಕಾತಿ ಮತ್ತು ಅವರ ಕಾರ್ಯ ಕ್ಷಮತೆಯ ಪರಿಶೀಲನೆ
- ನಿಯಮಿತವಾಗಿ ಪ್ರಗತಿಯ ವಿಮರ್ಶೆ
- ಇತರ ಸಂಘಟನೆಗಳು, ಸಂಘಗಳು, ಒಕ್ಕೂಟಗಳಲ್ಲಿ ಸದಸ್ಯತ್ವವನ್ನು ನಿರ್ಧರಿಸುವುದು

## ಹಣಕಾಸು

- ನಿಧಿಗಳ ಕ್ರೋಢೀಕರಣ
- ನಿಧಿಯ ಬಳಕೆ
- ಹಣ ಮತ್ತು ಸ್ವತ್ತುಗಳ ಸುರಕ್ಷಿತ ನಿರ್ವಹಣೆ
- ಬ್ಯಾಂಕಿನ ಖಾತೆ ನಿರ್ವಹಣೆ
- ಲೆಕ್ಕ ಪತ್ರಗಳ ನಿರ್ವಹಣೆ
- ಲಾಂಭಾಂಶದ ಹಂಚಿಕೆ
- ಕೊರತೆ ನಿರ್ವಹಣೆ




## ಶಾಸನಬದ್ಧ



- ಚುನಾವಣೆ ನಡೆಸುವುದು
- ಖಾತೆಗಳ ಲೆಕ್ಕ ಪರಿಶೋಧನೆ
- ವಾರ್ಷಿಕ ಲೆಕ್ಕಪತ್ರಗಳ ಸಲ್ಲಿಕೆ
- ಕಂಪನಿಯ ಬೈಲಾಗಳನ್ನು ತಿದ್ದುಪಡಿ ಮಾಡುವುದು
- ಮಂಡಳಿ ಸಭೆಗಳು ಮತ್ತು ಸಾಮಾನ್ಯ ಸಭೆಗಳು

೨

# ಪರಿಕಲ್ಪನ

## ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ

ಆಡಳಿತ ಮಂಡಳಿ ಸದಸ್ಯರಿಗೆ
ಕಲಿಕಾ ಕೈಪಿಡಿ




**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ

# ಪರಿಕಲ್ಪನ

# ರೈತ ಉತ್ಪಾದಕ ಸಂಘಟನೆಯ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ


| | | |
|---|---|---|
| ಪ್ರಥಮ ಮುದ್ರಣ | : | 2020 |
| ಪ್ರತಿಗಳು | : | 1000 |
| ಬೆಲೆ | : | ರೂ.150.00 |
| ಪ್ರಕಾಶಕರು | : | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು. |
| ಸಹಯೋಗ | : | |

ಈ ತರಬೇತಿ ಮಾರ್ಗದರ್ಶಿಯನ್ನು ಮಹಿಳಾ ಅಭಿವೃದ್ಧಿ ಸೊಸೈಟಿ ಹಾಗೂ ಡಿ.ಜಿ.ಆರ್.ವಿ. ಜೆರ್ಮನಿ ಇವರಿಂದ ಮುದ್ರಿಸಲಾದ ಇನ್ಸಿಟ್ಯೂಷನಲ್ ಸ್ಟಕ್ಚರ್ ಎಂಡ್ ಡಿಸೈನ್ ಆಫ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ – ಪರಿಕಲ್ಪನ ಎಂಬ ತರಬೇತಿ ಮಾರ್ಗದರ್ಶಿಯ ಇಂಗ್ಲೀಷ್ ಅವತರಣಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಿ ಅಗತ್ಯತೆಗೆ ಅನುಸಾರವಾಗಿ ಮಾರ್ಪಾಡು ಮಾಡಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಇವರಿಂದ ಮುದ್ರಿಸಲಾಗಿದೆ.



ಸಂಕಲನ

ಡಾ.ಅಶೋಕ ಎಸ್. ಆಲೂರ, ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಜಿ. ಬಸವರಾಜ್, ಉಪ ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ. ಇಟಗಿ ಪ್ರಭಾಕರ್, ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಶ್ರೀ. ಮಂಜುನಾಥ ಎಂ., ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಶಶಿಭೂಷಣ ಅ. ಘಟ್ನಟ್ಟಿ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಕೆ.ಜೆ.ಪರಮೇಶ್ವರಪ್ಪ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಎಸ್. ಕುಮಾರ್.ಹಿರಿಯ ಫೆಲೊ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

# ಮುನ್ನುಡಿ

ಕೃಷಿ ಹಾಗೂ ತೋಟಗಾರಿಕೆ ಕ್ಷೇತ್ರಗಳು ದೇಶದ ಆರ್ಥಿಕತೆಯ ಪ್ರಮುಖ ಆಧಾರ ಸ್ಥಂಭಗಳಲ್ಲಿ ಒಂದಾಗಿದ್ದು, ಗ್ರಾಮೀಣ ಪ್ರದೇಶದ ಕೃಷಿ ಆಧಾರಿತ ಸಮುದಾಯಗಳಿಗೆ ಆದಾಯ, ಉದ್ಯೋಗ, ಆಹಾರ ಹಾಗೂ ಪೌಷ್ಠಿಕಾಂಶದ ಭದ್ರತೆಯ ಮೂಲವಾಗಿವೆ. ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರಮಾಣದ ಜನಸಂಖ್ಯೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಮೇಲೆ ಅವಲಂಬಿತರಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಂತ್ರಜ್ಞಾನ ಮಾಹಿತಿ, ಬಂಡವಾಳ ಮತ್ತು ಮಾರುಕಟ್ಟೆಯ ಮಾಹಿತಿ ಹಾಗೂ ಸೌಲಭ್ಯಗಳ ಹಲವಾರು ಸವಾಲುಗಳನ್ನು ಎದುರುಸುತ್ತಿರುವುದು ಒಂದಡೆಯಾದರೇ ಮತ್ತೊಂದೆಡೆ, ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಅವಲಂಬಿತ ಕಚ್ಚಾ ವಸ್ತುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಹೆಚ್ಚಿನ ವಹಿವಾಟು ವೆಚ್ಚದಿಂದಾಗಿ ನಷ್ಟವಾಗುತ್ತದೆ ಇದರಿಂದಾಗಿ ಆಹಾರ ಸರಬರಾಜು ಸರಪಳಿ ಅಸಮರ್ಥವಾಗುತ್ತದಲಿದೆ.ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ಉತ್ಪಾದಕ ಸಂಸ್ಥೆಗಳ ರಚನೆ ಹಾಗೂ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದೇಶದಲ್ಲಿ ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತ ಉತ್ಪಾದಕ ಸಂಸ್ಥೆಗಳನ್ನು ಈ ಕಾಯ್ದೆಯ ಅಡಿಯಲ್ಲಿ ನೋಂದಾಯಿಸುವ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಕೃಷಿಯನ್ನು ಒಂದು ಉದ್ದಿಮೆ ರೂಪದಲ್ಲಿ ನೋಡುವಂತಹ ಚಿಂತನೆಗೆ ಚಾಲನೆ ನೀಡಿದಂತಾಗಿದೆ.ಈ ವರ್ಷದ ಕೇಂದ್ರ ಆಯವ್ಯಯದಲ್ಲಿ ಸುಮಾರು 10000 ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ಅವಶ್ಯಕ ತಂತ್ರವನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ, ಅಭಿವೃದ್ಧಿ ಹಾಗೂ ಮೌಲ್ಯ ಸರಪಳಿಯಲ್ಲಿ ಅವುಗಳನ್ನು ವಿವಿಧ ಸಂಸ್ಥೆಗಳ ಜೊತೆಗೆ ಸಂಬಂಧ ಕಲ್ಪಿಸುವ ಮೂಲಕ ಅವುಗಳು ಸ್ವತಂತ್ರ ವ್ಯವಹಾರಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಪೂರಕವಾಗುವಂತೆ ಕರ್ನಾಟಕ ರೈತ ಉತ್ಪಾದಕ ಸಂಸ್ಥೆಗಳ ನೀತಿ - 2018ನ್ನು ಜಾರಿಗೆ ತರಲಾಗಿದೆ. ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು, ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಹೆಚ್ಚುತ್ತಿರುವ ರೈತ ಉತ್ಪಾದಕ ಸಂಸ್ಥೆಗಳ ಸಂಖ್ಯೆಗಳ ದೃಷ್ಟಿಯಿಂದ, ರೈತ ಉತ್ಪಾದಕ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ. ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿದ ಹಲವಾರು ಸಂಸ್ಥೆಗಳಾದ (ನಬಾರ್ಡ್), ಎಸ್ ಎಫ್ ಎ ಸಿ , ರಾಜ್ಯ ಅಭಿವೃದ್ಧಿ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ತಾಂತ್ರಿಕ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಿಂದ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದ್ದರೂ, ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವಿವಿಧ ಪಾಲುದಾರರಿಗೆ ಅದರಲ್ಲಿಯೂ ಮುಖ್ಯವಾಗಿ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸರಳ ಮತ್ತು ಸ್ಪಷ್ಟವಾದ ವಿಷಯಗಳನ್ನು ಒಳಗೊಂಡಿರುವ ತರಬೇತಿ ಕೈಪಿಡಿಗಳ ತಯಾರಿಕೆಯ ಅಗತ್ಯವನ್ನು ಅರಿತುಕೊಂಡು, ಹಲವಾರು ತರಬೇತಿ ಕೈಪಿಡಿಗಳನ್ನು ಪ್ರಕಟಿಸುವ ಉತ್ಕೃಷ್ಟ ಕೇಂದ್ರದ ಪ್ರಯತ್ನ ಶ್ಲಾಘನೀಯ. ಈ ತರಬೇತಿ ಕೈಪಿಡಿ ಒಂದು ಉಪಯುಕ್ತ ಕೈಪಿಡಿಯಾಗಿ ಉಪಯೋಗವಾಗುವದೇಂಬುದು ನಮ್ಮ ಆಶಯ.

**ಕುಲಪತಿಗಳು**
**ತೋಟಗಾರಿಕೆ ವಿಶ್ವವಿದ್ಯಾಲಯ,**
**ಬಾಗಲಕೋಟೆ**

# ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ ಕಲಿಕಾ ಮಾಡ್ಯೂಲ್‌ನ ಉಪಯುಕ್ತತೆ.

ಭಾರತದ ಕೃಷಿ ಕ್ಷೇತ್ರದ ಸೂಕ್ಷ್ಮ ಅವಲೋಕನ ಮಾಡಿದಾಗ ಭಾರತೀಯ ಕೃಷಿಕರು ಎದುರಿಸುತ್ತಿರುವ ಹಲವಾರು ಸವಾಲುಗಳು ನಮಗೆ ಗೋಚರವಾಗುತ್ತವೆ. ಈ ಎಲ್ಲ ಸವಾಲುಗಳ ಮಧ್ಯೆಯು ಸ್ವತಂತ್ರ ನಂತರದ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ ಶ್ರೇಯಸ್ಸು ಈ ದೇಶದ ರೈತ ಸಮುದಾಯಕ್ಕೆ ಸಲ್ಲುತ್ತದೆ. ಚೀನಾ ದೇಶವನ್ನು ಹೊರತುಪಡಿಸಿದರೆ ಅತೀ ಹೆಚ್ಚು ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿದ ನಮ್ಮ ದೇಶದಲ್ಲಿ ಅವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ರಾಷ್ಟ್ರಾದ್ಯಂತ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡುತ್ತಲಿವೆ.ಕೇಂದ್ರ ಸರ್ಕಾರವು 2020 ಆಯವ್ಯಯ ಘೋಷಣೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನಕ್ಕಾಗಿ ವಿಶೇಷ ತಂತ್ರವನ್ನು ಕೂಡ ಪ್ರಕಟಿಸಿದೆ.ಕರ್ನಾಟಕದಲ್ಲಿ ರಾಜ್ಯ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ನೀತಿಯನ್ನು 2018 ರಲ್ಲಿಯೇ ಬಿಡುಗಡೆ ಮಾಡುವ ಮೂಲಕ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ತನ್ನದೇ ಆದ ವಿಶೇಷ ಯೋಜನೆಯನ್ನು ಹಾಕಿಕೊಂಡಿದೆ. ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗಾಗಿ ಮತ್ತು ಅದರಲ್ಲಿಯೂ ವಿಶೇಷವಾಗಿ ಈ ಸಂಸ್ಥೆಗಳ ವಿವಿಧ ಪದಾಧಿಕಾರಿಗಳಿಗೆ ತರಬೇತಿ ಮಾರ್ಗದರ್ಶನ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಸ್ಥಾಪಿತವಾದ ಹಲವಾರು ರೈತ ಉತ್ಪಾದಕ ಸಂಸ್ಥೆಗಳ ಪದಾಧಿಕಾರಿಗಳಿಗೆ, ರೈತ ಸದಸ್ಯರಿಗೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವ ಅಭಿವೃದ್ಧಿ ಇಲಾಖೆಗಳ ವಿವಿಧ ಅಧಿಕಾರಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನವನ್ನು ಉತ್ಕೃಷ್ಟ ಕೇಂದ್ರದಿಂದ ನೀಡಲಾಗುತ್ತಿದೆ.  ಈ ದಿಶೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಲವಾರು ವಿಷಯಗಳ ಬಗ್ಗೆ ತರಬೇತಿ ಕೈಪಿಡಿಗಳನ್ನು ವಿವಿಧ ಅನುಭವಿ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.ತೆಲಂಗಾಣ ರಾಜ್ಯದ ಮಹಿಳಾ ಅಭಿವೃದ್ಧಿ ಸೊಸೈಟಿ ಮಧುಮೂರ್ತಿ ಹಾಗೂ ಶ್ರೀಮತಿ ರಾಮಲಕ್ಷ್ಮಿ ಅವರಿಂದ ತಯಾರಿಸಲಾದ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ ನಿರ್ವಹಣೆ ಕುರಿತ ತರಬೇತಿ ಕೈಪಿಡಿಯ ಆಧಾರದ ಮೇಲೆ ಈ ಕಲಿಕಾ ಮಾಡ್ಯೂಲ್‌ನ್ನು ಪ್ರಕಟಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ಎಲ್ಲ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ನಿದೇಶಕರುಗಳು ಈ ಕಲಿಕಾ ಕೈಪಿಡಿಯ ಉಪಯೋಗವನ್ನು ಪಡೆಯುವರೆಂಬುದು ನಮ್ಮ ಆಶಯವಾಗಿದೆ.ಈ ಪ್ರಕಟಣೆಯನ್ನು ಹೊರತರುವಲ್ಲಿ ಸಹಭಾಗಿತ್ವ ನೀಡಿದ ಮಹಿಳಾ ಅಭಿವೃದ್ಧಿ ಸೊಸೈಟಿ, ಜಿ.ಐ.ಝಡ್ ಬೆಂಗಳೂರು, ಮೈರಾಡಾ, ಡಬ್ಲುಹೆಚ್‌ಹೆಚ್ ಡಿ.ಜಿ.ಆರ್.ವಿ ಹಾಗೂ ಸ್ಕಿಲ್ ಇಂಡಿಯಾ ಇವರಿಗೆ ವಿಶೇಷವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಅವರ ಕೊಡುಗೆಯನ್ನು ಈ ಮೂಲಕ ದಾಖಲಿಸಲಿಚ್ಛಿಸುತ್ತೇನೆ.

**ನಿರ್ದೇಶಕರು**
**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**
**ಬೆಂಗಳೂರು**

# ಪರಿವಿಡಿ


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| I. | ಕಲಿಕಾ ಕೈಪಿಡಿಯ ಕುರಿತು | |
| II. | ಶದ್ದ ಸಂಗ್ರಹ/ ಪದ ಸಂಗ್ರಹ | |
| III. | ಮೂಲ ಸಮೀಕ್ಷೆ | |
| 1. | ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ | |
| 2. | ರೈತಉತ್ಪಾದಕ ಸಂಸ್ಥೆಗಳಿಗೆ ಕಾರ್ಯಾಚರಣಾ ತಂತ್ರಗಳು | |
| 3. | ಪಾತ್ರಗಳು ಮತ್ತು ಜವಾಬ್ದಾರಿಗಳು | |
| | ಕಲಿಕಾ ಸಾಮಗ್ರಿಗಳು | |
| | ಅಂತಿಮ ಸಮೀಕ್ಷೆ | |

# I. ಕಲಿಕಾ ಕೈಪಿಡಿಯ ಕುರಿತು

**ಮಂಡಳಿ ನಿರ್ದೇಶಕರ ಕಲಿಕಾ ಕೈಪಿಡಿ**

1. ಜಾಗೃತಿ– ರೈತ ಉತ್ಪಾದಕರ ಸಂಸ್ಥೆಗಳು: ಪರಿಚಯ & ಉದ್ದೇಶ
2. ಪರಿಕಲ್ಪನಾ – ಸಾಂಸ್ಥಿಕ ರಚನೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ವಿನ್ಯಾಸ
3. ವಿನಿಮಯ– ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ
4. ಪ್ರೇರಣ – ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಆಡಳಿತ
5. ಸಮರ್ಥನ – ರೈತ ಉತ್ಪಾದಕರ ಸಂಸ್ಥೆಗಳ ನಿರ್ವಹಣೆ
6. ಸುಧರ್ಮ – ರೈತ ಉತ್ಪಾದಕರ ಸಂಸ್ಥೆಗಳ ಕಾನೂನು ಆಚರಣೆಗಳು
7. ವ್ಯಾಪಾರೀ ಯೋಜನೆ
8. ಲೆಕ್ಕಪತ್ರ ಮತ್ತು ಹಣಕಾಸು
9. ಸುಗ್ಗಿ, ವಿತರಣ ಸರಪಳಿ ನಿರ್ವಹಣೆ
10. ಮಾರುಕಟ್ಟೆ
11. ತೋಟಗಾರಿಕಾ ಉತ್ಪಾದನಾ ಹೆಚ್ಚಳದ ಸೇವೆಗಳು
12. ನಾಯಕತ್ವ

ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ– ಕಲಿಕಾ ಕೈಪಿಡಿಗಳ ಸರಣಿಯಲ್ಲಿ ಎರಡನೆಯದು. ಈ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಯ ಸಾಂಸ್ಥಿಕ ರಚನೆಯ ಬಗ್ಗೆ ವಿವರಿಸುತ್ತದೆ.

## ಉದ್ದೇಶ

ಈ ಕೈಪಿಡಿಯ ಉದ್ದೇಶವೆಂದರೆ ರೈತ ಉತ್ಪಾದಕ ಸಂಸ್ಥೆಯ ನಿರ್ದೇಶಕರ ಮಂಡಳಿಯ ಸದಸ್ಯರಗಳಿಗೆ ಅಗತ್ಯ ತಿಳುವಳಿಕೆ ಮತ್ತು ದೃಷ್ಟಿಕೋನವನ್ನು ನೀಡಿ ಅವರು ತಮ್ಮ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಕಾಂತರ ರೈತ ಉತ್ಪಾದಕ ಸಂಸ್ಥೆಗಳನ್ನು ಸದೃಢವಾಗಿ ಸಂಘಟಿಸಿ ತನ್ನ ರೈತ ಸದಸ್ಯರಿಗೆ ಅನುಕೂಲವಾಗಿರುವಂತಹ ಸೇವೆಗಳನ್ನು ಒದಗಿಸುವಂತೆ ಮಾಡುವುದು.

## ಉದ್ದೇಶಿತ ಗುಂಪು

ಈ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಯ ಸದಸ್ಯರನ್ನು ಗುರಿಯಾಗಿರಿಸಿಕೊಂಡಿದೆ, ನಿರ್ದೇಶಕ ಮಂಡಳಿ ಸದಸ್ಯರು ತಮ್ಮ ರೈತ ಉತ್ಪಾದಕ ಸಂಸ್ಥೆ ಆಡಳಿತದಲ್ಲಿ ಕನಿಷ್ಠ ಒಂದು ವರ್ಷದ ಅನುಭವ ಹೊಂದಿರುವವರನ್ನು ಗಮನದಲ್ಲಿ ಇಟ್ಟುಕೊಂಡು ರಚಿಸಲಾಗಿದೆ.

## ಕಲಿಕೆಯ ಉದ್ದೇಶಗಳು

ಸಾಂಸ್ಥಿಕ ರಚನೆ ಮತ್ತು ವಿನ್ಯಾಸದ ಈ ಕೈಪಿಡಿಯ ಪ್ರಮುಖ ಕಲಿಕೆಯ ಉದ್ದೇಶಗಳು;

- ರೈತ ಉತ್ಪಾದಕ ಸಂಸ್ಥೆ ಸೂಕ್ತವಾದ ಸಾಂಸ್ಥಿಕ ಮಾದರಿಯ ಬಗ್ಗೆ ತಿಳುವಳಿಕೆ ಪಡೆಯಲು.
- ರೈತ ಉತ್ಪಾದಕ ಸಂಸ್ಥೆಯ ವಿವಿಧ ಕಾರ್ಯಕಾರಿಗಳ ಹಾಗೂ ಅವರುಗಳ ಪರಸ್ಪರ ಸಂಬಂಧಗಳನ್ನು ಅರ್ಥೈಸಿಕೊಳ್ಳುವುದು.
- ವಿವಿಧ ಕಾರ್ಯಕಾರಿಗಳು ತಮ್ಮ ಪಾತ್ರಗಳ ಹಾಗೂ ಕರ್ತವ್ಯಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಹೊಂದಿ ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು.

## ರಚನೆ ಹಾಗೂ ವಿಷಯಗಳು

ಈ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆಯೋಂದಿಗೆ ಪ್ರಾರಂಭವಾಗುತ್ತದೆ ಮತ್ತು ನಂತರ ರೈತ ಉತ್ಪಾದಕ ಸಂಸ್ಥೆಯ ಕಾರ್ಯ ಕಾರಣಿಗಳ ಬಗ್ಗೆ ಅಂದರೆ ಸದಸ್ಯರು, ನಿರ್ದೇಶಕರ ಮಂಡಳಿ ಮತ್ತು ಸಿಬ್ಬಂದಿಗಳ ಪ್ರಮುಖ ಪಾತ್ರಗಳು ಮತ್ತು ಅವರ ನಡುವಿನ ಪರಸ್ಪರ ಸಂಬಂಧಗಳ ಬಗ್ಗೆ ವಿವರಿಸುತ್ತದೆ.

## ಬಳಸುವುದು ಹೇಗೆ

ನಿರ್ದೇಶಕ ಮಂಡಳಿಯ ಸದಸ್ಯರುಗಳು ಈ ಕೈಪಿಡಿಯನ್ನು ಸ್ವತಹ ತಾವೆ ಉಪಯೋಗಿಸಬಹುದು ಅಥವಾ ಬಾಹ್ಯಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳಬಹುದು. ಈ ಕೈಪಿಡಿಯ ಜೋತೆಗೆ ಸಂಬಂಧಿಸಿದ ಚಿತ್ರಗಳು, ಬಿತ್ತಿಚಿತ್ರಗಳನ್ನು ನೀಡಲಾಗಿದೆ. ಅವುಗಳನ್ನು ಕಲಿಕೆಯ ಸಮಯದಲ್ಲಿ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಬಹುದು.

ಈ ಕೈಪಿಡಿಯ ಕಲಿಕೆಯನ್ನು ನೀವು ಆನಂದಿಸುತ್ತಿರಿ ಮತ್ತು ನಿಮ್ಮ ರೈತ ಉತ್ಪಾದಕ ಸಂಸ್ಥೆಯನ್ನು ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನಿಭಾಯಿಸುತ್ತಿರಿ ಎಂದು ನಾವು ಆಶೀಸುತ್ತೇವೆ.

# II. ಸಂಕ್ಷಿಪ್ತಾಕ್ಷರಗಳು

**ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ (ಎಓಎ)** : ಸಹಕಾರಿ ಸಂಘಗಳ ಬೈಲಾಗಳಂತೆಯೆ ಆರ್ಟಿಕಲ್ಸ್‌ಆಫ್ ಅಸೋಸಿಯೇಷನ್ (ಎಓಎ) ರೈತ ಉತ್ಪಾದಕ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಎಓಎ ಕಂಪನಿಯ ಕಾರ್ಯಚರಣೆಗಳ ನಿಯಮಗಳನ್ನು ನಿರ್ದಿಷ್ಟಪಡಿಸುತ್ತದೆ ಮತ್ತು ಕಂಪನಿಯ ಉದ್ದೇಶ ಮತ್ತು ಸಾಧಿಸುವ ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ.

ನಿರ್ದೇಶಕರ ಮಂಡಳಿಯ ಎಓಎಯನ್ನು ಸಿದ್ದಪಡಿಸಬೇಕು ಮತ್ತು ಅವುಗಳಿಗೆ ಕಂಪನಿಗಳ ರಿಜಿಸ್ಟ್ರಾರ್‌ರವರಿಂದ ಅನುಮೋದನೆ ಪಡೆಯಬೇಕು.

ಎಓಎಗೆ ತಿದ್ದುಪಡಿಯನ್ನು ತರುವ ಅಧಿಕಾರ ಸಂಸ್ಥೆಯ ಸಾಮಾನ್ಯ ಸಭೆಗೆ ಮಾತ್ರ ಇರುತ್ತದೆ, ತಿದ್ದುಪಡಿಗಳಿಗೂ ಸಹ ಕಂಪನಿ ರಿಜಿಸ್ಟ್ರಾರ್‌ರಿಂದ ಅನುಮೋಧನೆ ಪಡೆಯಬೇಕು.

**ಆಡಳಿತ ಮಂಡಳಿ/ ನಿರ್ದೇಶಕರ ಮಂಡಳಿ** : ನಿರ್ದೇಶಕರ ಮಂಡಳಿಯು ಸಂಸ್ಥೆಯ ಆಡಳಿತ ನಿರ್ವಹಿಸುವ ಅಂಗವಾಗಿದ್ದು ಸಂಸ್ಥೆಯ ನೀತಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಮೂಖಾಂತರ ಸಂಸ್ಥೆಯು ತನ್ನ ಸದಸ್ಯರ ಹೇಳಿಗೆಗೆ ಕಾರ್ಯನಿರ್ವಹಿಸುವದನ್ನು ಖಾತರಿ ಪಡಿಸಿಕೊಳ್ಳುತ್ತದೆ. ಸಂಸ್ಥೆಯ ಸಾಮಾನ್ಯ ಸಭೆಯಿಂದ, ಅಂದರೆ ಸಂಸ್ಥೆಯ ಸದಸ್ಯರಿಂದ ಆಯ್ಕೆಯಾದ ಸದಸ್ಯರನ್ನು ಒಳಗೊಂಡಿರುತ್ತದೆ.

**ಬೈಲಾಗಳು** : ಸಹಕಾರಿ ಸಂಘಗಳ ಕಾರ್ಯನಿರ್ವಹಣೆಯ ನಿಮಯಗಳನ್ನು ಬೈಲಾಗಳು ಒಳಗೊಂಡಿರುತ್ತವೆ. ಪತ್ರಿಯೊಂದು ಸಹಕಾರಿ ಸಂಘವು ತನ್ನದೆ ಆದ ಬೈಲಾಗಳನ್ನು ಹೊಂದಿರಬೇಕು ಮತ್ತು ತನ್ನ ಎಲ್ಲಾ ವ್ಯವಹಾರಗಳನು / ಚಟುವಟಿಕೆಗಳನ್ನು ಬೈಲಾಗಳ ವ್ಯಾಪ್ತಿಯಲ್ಲೆ ನಿರ್ವಹಿಸಬೇಕು.

**ಸಹಕಾರಿ ಸಂಘ** : ಸಹಕಾರಿ ಸಂಘಗಳ ಕಾಯ್ದೆಯಡಿ ನೋಂಧಣಿಯಾದ ರೈತ ಉತ್ಪಾದಕ ಸಂಸ್ಥೆಗಳನ್ನು ಸಹಕಾರಿ ಸಂಘಗಳೆಂದು ಕರೆಯುಲಾಗುತ್ತದೆ (ಉದಾ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959)

**ಮುಖ್ಯ ಕಾರ್ಯನಿರ್ವಹಣಾಧಿಕಾರಿ/ ವ್ಯವಸ್ಥಾಪಕರು/ ಪ್ರಧಾನ ವ್ಯವಸ್ಥಾಪಕರು** : ಪ್ರತಿಯೊಂದು ರೈತ ಉತ್ಪಾದಕ ಸಂಸ್ಥೆಯು ಪೂರ್ಣಾವಧಿ ಮುಖ್ಯ ಕಾರ್ಯನಿರ್ವಣಾಧಿಕಾರಿಯನ್ನು ಹೋಂದಿರಬೇಕು ಅಥವಾ ಯಾವುದೆ ಪದನಾಮದಲ್ಲಿ ಇರಬಹುದು (ವ್ಯವಸ್ಥಾಪಕರು/ಪ್ರಧಾನ ವ್ಯವಸ್ಥಾಪಕರು). ಇವರು ಸಂಸ್ಥೆಯ ಆಡಳಿತ ಮಂಡಳಿಯ ನಿಯಂತ್ರಣದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ ಮತ್ತು ಸಂಸ್ಥೆಯು ಕಾರ್ಯಕ್ಷಮತೆಗೆ ಜವಾಬ್ದಾರರಾಗಿರುತ್ತಾರೆ.

**ಲಾಭಾಂಶ [ಬೋನಸ್]** : ರೈತ ಉತ್ಪಾದಕ ಸಂಸ್ಥೆಯು ತನ್ನ ಲಾಭಾಂಶದ ಒಂದು ಭಾಗವನ್ನು ತನ್ನ ಸದಸ್ಯರಿಗೆ ವಿತರಿಸುವ ಮೊತ್ತ.

**ರೈತ ಉತ್ಪಾದಕ ಸಂಸ್ಥೆ** : ರೈತಉತ್ಪಾದಕ ಸಂಸ್ಥೆ ಎನ್ನುವುದು ರೈತ ಸದಸ್ಯರ ಒಡೆತನದ ಮತ್ತು ನಿಯಂತ್ರಿತ ನೋಂದಾಯಿತ ಸಂಸ್ಥೆಯಾಗಿದೆ. ರೈತ ಉತ್ಪಾದಕ ಸಂಸ್ಥೆಯ ಉದ್ದೇಶವು ಅವರ ಸದಸ್ಯರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವ ಮೂಲಕ ಅವರ ಸಾಮಾನ್ಯ ಅಗತ್ಯಗಳನ್ನು ಪೂರೈಸುವುದು.

ರೈತ ಉತ್ಪಾದಕ ಸಂಸ್ಥೆಗಳು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸೇವೆಗಳನ್ನ ಒದಗಿಸುತ್ತದೆ.

ರೈತ ಉತ್ಪಾದಕ ಸಂಸ್ಥೆಗಳು ಓಪಚಾರಿಕ ಸಂಸ್ಥೆಗಳಾಗಿರುವುದರಿಂದ ಅವರು ತಮ್ಮಕಚೇರಿ/ಮೂಲ ಸೌಕರ್ಯ, ಸಿಬ್ಬಂದಿ, ಆಡಳಿತ ವ್ಯವಸ್ಥೆಗಳನ್ನು ಹೊಂದಿರಬೇಕು ಮತ್ತು ನಿರ್ದೇಶಕರ ಮಂಡಳಿಯ ಅಧಿನದಲ್ಲಿಕಾರ್ಯ ನಿರ್ವಹಿಸಬೇಕು.

**ಒಕ್ಕೂಟ** : ಒಕ್ಕೂಟ ವ್ಯವಸ್ಥೆ ಕೆಲವು ಸೂಕ್ತ ಮಟ್ಟದಲ್ಲಿ (ಕ್ಲಸ್ಟರ್, ಪ್ರದೇಶ, ಮಂಡಲ್, ಜಿಲ್ಲೆ ಇತ್ಯಾದಿ) ಒಂದು ಉನ್ನತ ಹಂತದ ವ್ಯವಸ್ಥೆಯಾಗಿದ್ದು ಇದರಲ್ಲಿ ಒಂದೇ ರೀತಿಯ ವ್ಯವಹಾರದಲ್ಲಿ ತೊಡಗಿ ಕೊಂಡಿರುವ ವಿಭಿನ್ನ ಸಣ್ಣ ರೈತ ಉತ್ಪಾದಕ ಸಂಸ್ಥೆಗಳು ಸದಸ್ಯರಾಗಿರುತ್ತಾರೆ.

**ಜನರಲ್ ಬಾಡಿ/ ಸಾಮಾನ್ಯ ಸಭೆ** : ರೈತ ಉತ್ಪಾದಕ ಸಂಸ್ಥೆ ಎಲ್ಲಾ ಸದಸ್ಯರನ್ನು ಒಳಗೋಂಡ ಸಮೂಹವನ್ನು ಸಾಮಾನ್ಯ ಸಭೆ/ಜನರಲ್ ಬಾಡಿ ಎಂದು ಕರೆಯಲಾಗುತ್ತದೆ. ಸಾಮಾನ್ಯ ಸಭೆಯು ರೈತ ಉತ್ಪಾದಕ ಸಂಸ್ಥೆಯು ಸರ್ವೋಚ್ಚ ಅಧಿಕಾರವನ್ನು ಹೋಂದಿರುವ ಅಂಗವಾಗಿದೆ.

**ಸದಸ್ಯತ್ವ** : "ಸದಸ್ಯ" ಎಂದರೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯತ್ವವನ್ನು ಪಡೆದಿರುವ ಯಾವುದೆ ವ್ಯಕ್ತಿ ಅಥವಾ ಉತ್ಪಾದಕ ಸಂಸ್ಥೆ ಮತ್ತು ಸದಸ್ಯತ್ವದಲ್ಲಿ ಮುಂದುವರೆಯಲು ಅಗತ್ಯವಾದ ಅರ್ಹತೆಗಳನ್ನು ಮುಂದುವರಸಿ ಕೊಂಡಿರುವವರು. ರೈತ ಉತ್ಪಾದಕ ಸಂಸ್ಥೆಗಳ ಸದಸ್ಯತ್ವ ಪಡೆಯಲು ಯಾವುದೆ ವ್ಯಕ್ತಿ ಅಥವಾ ಉತ್ಪಾದಕ ಸಂಸ್ಥೆ ಆ ಸಂಸ್ಥೆಯ ಕಾರ್ಯಾಚಾರಣೆಯ ಪ್ರದೇಶದವರಾಗಿರಬೇಕು ಮತ್ತು ಸಂಸ್ಥೆಯ ಬೈಲಾಗಳ /ಎಓಎಗಳ ಪ್ರಕಾರ ಅರ್ಹತೆಗಳನ್ನು ಹೊಂದಿರಬೇಕು.

**ಸಂಸ್ಥೆಯ ಪಧಾರಿಕಾರಿಗಳು** : ಸಂಸ್ಥೆಗಳ ಪಧಾರಿಕಾರಿಗಳೆಂದರೆ ನಿರ್ದೇಶಕರ ಮಂಡಳಿಯಿಂದ ನಿರ್ದಿಷ್ಟ ಜವಾಬ್ದಾರಿಗಳನ್ನು ನಿರ್ವಹಿಸಲು ಆಯ್ಕೆಯಾದವರು, ಅಧ್ಯಕ್ಷರು, ಕಾರ್ಯದರ್ಶಿ, ಮುಖ್ಯಕಾರ್ಯನಿರ್ವಣಾಧಿಕಾರಿ, ಖಜಾಂಚಿ, ಇತ್ಯಾದಿ.

**ಉತ್ಪಾದಕ ಕಂಪನಿ** : ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ ನೋಂದಯಿತ ರೈತ ಉತ್ಪಾದಕ ಸಂಸ್ಥೆಯನ್ನು ಉತ್ಪಾದಕ ಕಂಪನಿ ಎಂದುಕರೆಯಲಾಗುತ್ತದೆ. ಉತ್ಪಾದಕ ಕಂಪನಿ ಎಂದರೆ ಸಕ್ಷನ್ 581 ಬಿ ಅಡಿಯಲ್ಲಿ ನಿರ್ದಿಷ್ಟ ಪಡಿಸಿದ ವಸ್ತುಗಳು ಮತ್ತು ಚಟುವಟಿಕೆಗಳಲ್ಲಿ ತೋಡಗಿಕೊಂಡಿರುವ ಸಂಸ್ಥೆಯಾಗಿದೆ.

**ಪ್ರೋತ್ಸಾಹ** : ರೈತ ಉತ್ಪಾದಕ ಸಂಸ್ಥೆ ನೀಡುವ ಸೇವೆಗಳನ್ನು ಉಪಯೋಗಿಸಿಕೊಂಡು ಸದಸ್ಯರು ಸಂಸ್ಥೆಯ ವ್ಯವಹಾರ ಚಟುವಟಿಕೆಗಳಲ್ಲಿ ಭಾಗವಹಿಸುವ ಮುಖಾಂತರ ಸಂಸ್ಥೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.

**ಪ್ರೋತ್ಸಾಹಕ ಬೋನಸ್** : ಪ್ರೋತ್ಸಾಹಕ ಬೋನಸ್ ಎಂದರೆ ರೈತ ಉತ್ಪಾದಕ ಸಂಸ್ಥೆ ತನ್ನ ಹೆಚ್ಚುವರಿ ಆದಾಯದಿಂದ ಸದಸ್ಯರಿಗೆ ಅವರ ಪ್ರೋತ್ಸಾಹಕ್ಕೆ ಅನುಗುಣವಾಗಿ ಸದಸ್ಯ ರೈತರಿಗೆ ಕೊಡುವ ಹಣ

# III. ಮೂಲ ಸಮೀಕ್ಷೆ

ಕೆಳಗೆ ನಾವು ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸದ ಕುರಿತು ಉತ್ತರ ನೀಡಬೇಕಾದ ಕೆಲವು ಮೂಲ ಪ್ರಶ್ನೆಗಳನ್ನು ಕೇಳಲಾಗಿದೆ. ಈ ಆರಂಭ ಸಮೀಕ್ಷೆ ಉದ್ದೇಶ ಈ ಪ್ರಶ್ನೆಗಳ ಕುರಿತು ನಮ್ಮ ಅರ್ಥೈಸುವಿಕೆಯನ್ನು ಕಂಡುಕೊಳ್ಳುವುದು ಮತ್ತು ಆ ಮೂಲಕ ವಿಷಯದ ಬಗ್ಗೆ ಮತ್ತಷ್ಟು ಕಲಿತುಕೊಳ್ಳಲು ಯತ್ನಿಸುವುದಾಗಿದೆ.

ಆದ್ದರಿಂದ ನಾವು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣವೆ?

ಪ್ರಶ್ನೆ 1 : ರೈತ ಉತ್ಪಾದಕ ಸಂಸ್ಥೆಗಳ ಒಕ್ಕೂಟಗಳನ್ನು ರಚಿಸಬಹುದೇ?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

ಪ್ರಶ್ನೆ 2 : ರೈತ ಉತ್ಪಾದಕ ಸಂಸ್ಥೆ ನಿರ್ದೇಶಕ ಮಂಡಳಿಯ ಸದಸ್ಯರು ಯಾರಿಗೆ ಜವಾಬ್ದಾರರಾಗಿರಬೇಕು?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

ಪ್ರಶ್ನೆ 3 : ರೈತ ಉತ್ಪಾದಕ ಸಂಸ್ಥೆ ಸಿಬ್ಬಂದಿ ಯಾರ ನಿಯಂತ್ರಣದ ಅಡಿಯಲ್ಲಿ ಕೆಲಸ ಮಾಡಬೇಕು?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

ಪ್ರಶ್ನೆ 4 : ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿ ಸದಸ್ಯರ ಪಾತ್ರಗಳು ಮತ್ತು ಜವಾಬ್ದಾರಿಗಳು ಯಾವುವು?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

# 1

# ರೈತ ಉತ್ಪಾದಕ ಸಂಸ್ಥೆಯ ಸಾಂಸ್ಥಿಕ ರಚನೆ

## ಅಧಿವೇಶನದ ಉದ್ದೇಶ:



ರೈತ ಉತ್ಪಾದಕ ಸಂಸ್ಥೆಗಳಿಗೆ ಸೂಕ್ತವಾದ ಸಾಂಸ್ಥಿಕ ಮಾದರಿಯ ಬಗ್ಗೆ ತಿಳುವಳಿಕೆ ಪಡೆಯುವುದು

### ವಿಷಯಗಳ ಪರಿವಿಡಿ

1. ರೈತಉತ್ಪಾದಕ ಸಂಸ್ಥೆಗಳಿಗೆ ಸೂಕ್ತವಾದ ಸಾಂಸ್ಥಿಕ ರಚನೆ
2. ವಿವಿಧ ಹಂತಗಳಲ್ಲಿನ ಕಾರ್ಯಗಳು/ಕೆಲಸಗಳು
3. ಒಕ್ಕೂಟ ವ್ಯವಸ್ಥೆಯಲ್ಲಿ ಸದಸ್ಯತ್ವ ಪಡೆಯುವುದು


## ಅವಲೋಕನ

ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಬಗ್ಗೆ ಮೊದಲನೇ ಕೈಪಿಡಿಯಲ್ಲಿ ಕೃಷಿಯಲ್ಲಿನ ಸಮಸ್ಯೆಗಳನ್ನು/ ಸವಾಲುಗಳನ್ನು ಸಾಮೂಹಿಕವಾಗಿ ಒಗ್ಗೂಡಿ ಎದುರಿಸುವುದಕ್ಕೆ ರೈತ ಉತ್ಪಾದಕ ಸಂಸ್ಥೆಗಳು ಪರಿಣಾಮಕಾರಿ ರೀತಿಯಲ್ಲಿ ಕೆಲಸ ಮಾಡಲು ಸಾಂಸ್ಥಿಕ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತವೆ, ಹಾಗೂ ರೈತ ಉತ್ಪಾದಕ ಸಂಸ್ಥೆಗಳ ಅರ್ಥ ಮತ್ತು ಪ್ರಮುಖ ಗುಣಲಕ್ಷಣಗಳ ಬಗ್ಗೆ ಅರಿತುಕೊಂಡಿದ್ದೇವೆ.

ಮೇಲಿನ ಹಿನ್ನೆಲೆಯೊಂದಿಗೆ, ಈಗ ನಾವು ರೈತಉತ್ಪಾದಕ ಸಂಸ್ಥೆಗಳ ಬಗ್ಗೆ ವಿಶೇಷವಾಗಿ ಸಾಂಸ್ಥಿಕ ರಚನೆಗಳ ಬಗ್ಗೆ ಗಮನ ಹರಿಸೋಣ. ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆಯ ಬಗ್ಗೆ ತಿಳಿಯಲು ನಾವು ಸಾಂಸ್ಥಿಕ ರಚನೆಯ ವಿವಿಧ ಅಂಶಗಳು, ರೈತ ಉತ್ಪಾದಕ ಸಂಸ್ಥೆಗಳ ವಿಭಿನ್ನ ಕಾರ್ಯಕಾರಿಗಳು ಮತ್ತು ಅವುಗಳಲ್ಲಿನ ಪರಸ್ಪರ ಸಂಬಂಧಗಳು ಮತ್ತು ವಿವಿಧ ಕಾರ್ಯಕಾರಿಗಳ ಪಾತ್ರಗಳನ್ನು ಅರ್ಥೈಸಿಕೊಳ್ಳೋಣ. ಈಗ ಅವುಗಳನ್ನು ಒಂದೊಂದಾಗಿ ನೋಡೋಣ.

## ಸಾಂಸ್ಥಿಕ ರಚನೆ

ರೈತ ಉತ್ಪಾದಕ ಸಂಸ್ಥೆಗಳಿಗೆ ವಿವಿಧ ರೀತಿಯ ಸಾಂಸ್ಥಿಕ ರಚನೆಗಳಿರಬಹುದಾದರು, ಎಲ್ಲಾ ರಚನೆಗಳು ವೈಯಕ್ತಿಕ ರೈತನಿಂದ ಪ್ರಾರಂಭವಾಗುತ್ತದೆ. ಅವುಗಳು ಸಣ್ಣ ಅನೌಪಚಾರಿಕ ರೈತ ಗುಂಪುಗಳು ಸಹ ಆಗಿರಬಹುದು. ಈ ಅನೌಪಚಾರಿಕ ಗುಂಪುಗಳು ಒಗ್ಗೂಡಿ ರೈತ ಉತ್ಪಾದಕ ಸಂಸ್ಥೆಗಳಾಗಿ ರೂಪುಗೊಳ್ಳುತ್ತವೆ. ಅಗತ್ಯವಿದ್ದಲ್ಲಿ ಈ ಪ್ರಾಥಮಿಕ ರೈತ ಉತ್ಪಾದಕ ಸಂಸ್ಥೆಗಳ ಒಕ್ಕೂಟವನ್ನು ಸೂಕ್ತ ಮಟ್ಟದಲ್ಲಿ ರಚಿಸಬಹುದು. ರೈತರು ಮತ್ತು ನೋಂದಾಯಿತ ಉತ್ಪಾದಕ ಸಂಸ್ಥೆಗಳು ಒಕ್ಕೂಟದ ಸದಸ್ಯರಾಗಬಹುದು. ಇತರೆ ಸಂಭವನೀಯ ರಚನೆಯೆಂದರೆ ರೈತರೆ ಒಟ್ಟಾಗಿ ರೈತ ಉತ್ಪಾದಕ ಸಂಸ್ಥೆಯನ್ನು ರಚಿಸುವುದು.




**ಎಫ್‌ಜಿ – ರೈತರ ಗುಂಪು     ಪಿಓ – ನಿರ್ಮಾಪಕರ ಸಂಸ್ಥೆ (ಗ್ರಾಮ / ಕ್ಲಸ್ಟರ್ ಮಟ್ಟ)**
**ಎಫ್‌ಪಿಓ – ರೈತ ಉತ್ಪಾದಕ ಸಂಸ್ಥೆ**

## ಸಂಬವನೀಯ ರಚನೆಗಳು

1 ರೈತ ಗುಂಪು–ಉತ್ಪಾದಕ ಸಂಸ್ಥೆ – ರೈತಉತ್ಪಾದಕ ಸಂಸ್ಥೆ

2 ರೈತ ಗುಂಪು–ರೈತ ಉತ್ಪಾದಕ ಸಂಸ್ಥೆ

3 ವೈಯಕ್ತಿಕ ರೈತರು–ರೈತ ಉತ್ಪಾದಕ ಸಂಸ್ಥೆ

## ವಿವಿಧ ಹಂತಗಳಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು

- ಒಕ್ಕೂಟ: ಸಂಸ್ಕರಣೆ, ಸಂಗ್ರಹಣೆ, ವ್ಯಾಪಾರ, ರೈತ ಉತ್ಪಾದಕ ಸಂಸ್ಥೆಗಳಿಗೆ ಹಣಕಾಸಿನ ಸೌಲಭ್ಯ, ತಾಂತ್ರಿಕತೆಯ ಸಂಪರ್ಕಗಳನ್ನು ಕಲ್ಪಿಸುವುದು ಇತ್ಯಾದಿ.

- ರೈತ ಉತ್ಪಾದಕ ಸಂಸ್ಥೆ: ಬೀಜ ಉತ್ಪಾದನೆ, ಪರಿಕರಗಳ ಪೂರೈಕೆ, ಸಂಗ್ರಹಣೆ, ಕೃಷಿ ಯಂತ್ರೋಪಕರಣಗಳ ಸೌಲಭ್ಯಗಳನ್ನು ಬಾಡಿಗೆ ಆಧಾರದಲ್ಲಿ ಕೊಡುವುದು.

- ರೈತರ ಗುಂಪು – ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷತೆ ಏರ್ಪಡಿಸುವದು, ರೈತ ಕ್ಷೇತ್ರ ಪಾಠ ಶಾಲೆ ಇತ್ಯಾದಿ.

ಮೇಲೆ ತಿಳಿಸಿದಂತೆ ನಮ್ಮ ದೇಶದಲ್ಲಿ ವಿವಿಧ ರೀತಿಯ ರೈತ ಉತ್ಪಾದಕ ಸಂಸ್ಥೆಗಳಿವೆ. ಎಲ್ಲಾ ರೀತಿಯ ಸಾಂಸ್ಥಿಕ ವ್ಯವಸ್ಥೆಗಳಲ್ಲಿ ಯಶಸ್ವಿ ಮತ್ತು ವೈಫಲ್ಯಗಳನ್ನು ನೋಡಬಹುದಾಗಿದೆ. ಆದ್ದರಿಂದ ರೈತ ಉತ್ಪಾದಕ ಸಂಸ್ಥೆಗಳ ಸೂಕ್ತ ಸಾಂಸ್ಥಿಕ ರಚನೆಯನ್ನು ಹೊಂದಿದ್ದರೂ ಸಹ, ರಚನೆಯ ವಿವಿಧ ಹಂತಗಳು ಪರಿಣಾಮಕಾರಿಯಾಗಿ ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವದನ್ನು ಖಚಿತಪಡಿಸಿಕೊಳ್ಳುವುದು ಅತಿ ಮುಖ್ಯವಾಗಿದೆ.

ಯಾವುದೇ ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆಯು ಈ ಕೆಳಗಿನ ಎರಡು ಪ್ರಮುಖ ಉದ್ದೇಶಗಳನ್ನು ಪೂರೈಸಬೇಕಾಗಿದೆ;

1. ರೈತ ಉತ್ಪಾದಕ ಸಂಸ್ಥೆ ಸದಸ್ಯರಿಗೆ ಸಮರ್ಥರೀತಿಯಲ್ಲಿ ಸೇವೆಗಳನ್ನು ಪೂರೈಸುವುದು.

2. ರೈತ ಉತ್ಪಾದಕ ಸಂಸ್ಥೆ ವ್ಯವಹಾರದ ಕಾರ್ಯ ಸಾಧ್ಯತೆಯನ್ನು ಖಚಿತಪಡಿಸಿಕೊಳ್ಳುವುದು.

## ಒಕ್ಕೂಟ ವ್ಯವಸ್ಥೆಯಲ್ಲಿ ಸದಸ್ಯತ್ವ

ಒಕ್ಕೂಟಗಳೆಂದರೆ ಒಂದು ಸೂಕ್ತ ಮಟ್ಟದಲ್ಲಿ (ಕ್ಲಸ್ಟರ್, ತಾಲ್ಲೂಕ್, ಮಂಡಲ್, ಜಿಲ್ಲೆ, ರಾಜ್ಯ, ಇತ್ಯಾದಿ) ಹಲವು ರೈತ ಉತ್ಪಾದಕ ಸಂಸ್ಥೆಗಳು ಒಟ್ಟಾಗಿ ಸೇರಿ ರಚಿಸಿಕೊಂಡ ಸಂಸ್ಥೆಗಳು. ಇದರಲ್ಲಿ ಒಂದೇ ರೀತಿಯ ವ್ಯವಹಾರದಲ್ಲಿ ತೋಡಗಿಕೊಂಡಿರುವ ಬೇರೆ ಬೇರೆ ಸಣ್ಣ ರೈತ ಉತ್ಪಾದಕ ಸಂಸ್ಥೆಗಳು (ಪ್ರಾಥಮಿಕ ಉತ್ಪಾಕರನ್ನೊಳಗೊಂಡ) ಒಕ್ಕೂಟದ ಸದಸ್ಯರಾಗಿರುತ್ತಾರೆ.

ಉದಾಹರಣೆಗೆ: ಒಂದು ನಿರ್ದಿಷ್ಟ ಪ್ರದೇಶದ ಹಳ್ಳಿ ಮಟ್ಟದ ಹಾಲು ಉತ್ಪಾದಕರ ಸಂಘಗಳು ಒಟ್ಟಾಗಿ ಉನ್ನತ ಮಟ್ಟದಲ್ಲಿ ಹಾಲು ಉತ್ಪಾದಕ ಸಂಘಗಳ ಒಕ್ಕೂಟವನ್ನು ರಚಿಸಿಕೊಳ್ಳಬಹುದು. ವಿವಿಧ ಚಟುವಟಿಕೆಗಳಾದ ಹಾಲು ಸಂಗ್ರಹಣೆ, ಗುಣಮಟ್ಟದ ತಪಾಸಣೆ, ಹಣದ ಪಾವತಿ ಇತ್ಯಾದಿ ಚಟುವಟಿಕೆಗಳನ್ನು ಗ್ರಾಮ ಮಟ್ಟದ ಹಾಲು ಉತ್ಪಾದಕ ಸಂಘಗಳಲ್ಲಿ ಮಾಡಲಾಗುತ್ತದೆ. ಆದರೆ ಹಾಲಿನ ಶೀತಲೀಕರಣ, ಫ್ಯಾಕಿಂಗ್, ಬ್ರಾಂಡಿಂಗ್, ಮಾರುಕಟ್ಟೆ, ತಾಂತ್ರಿಕ ಬೆಂಬಲ ಇತ್ಯಾದಿ ಚಟುವಟಿಕೆಗಳನ್ನು ಒಕ್ಕೂಟ ಮಟ್ಟದಲ್ಲಿ ಕೈಗೆತ್ತಿಕೊಳ್ಳುತ್ತಲಗುತ್ತದೆ.

**ಚರ್ಚೆಯ ವಿಷಯ:** ಒಕ್ಕೂಟ ವ್ಯವಸ್ಥೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಸದಸ್ಯತ್ವವನ್ನು ಹೊಂದಬಹುದೇ? ಯಾವ ಉದ್ದೇಶ/ ಸೇವೆಗಳಿಗಾಗಿ ರೈತ ಉತ್ಪಾದಕ ಸಂಸ್ಥೆಗಳು ಒಕ್ಕೂಟದಲ್ಲಿ ಸದಸ್ಯರಾಗಬಹುದು?

ರೈತ ಉತ್ಪಾದಕ ಸಂಸ್ಥೆ ತಮ್ಮ ಭೌಗೋಳಿಕ ಪ್ರದೇಶದಲ್ಲಿ ಮತ್ತು ಒಂದೇ ರೀತಿಯ ವ್ಯಾಪಾರದಲ್ಲಿ ತೊಡಗಿದ್ದರೆ ಒಕ್ಕೂಟ ವ್ಯವಸ್ಥೆಯಲ್ಲಿ ಸದಸ್ಯರಾಗಬಹುದು. ವಾಸ್ತವವಾಗಿ ಒಕ್ಕೂಟ ವ್ಯವಸ್ಥೆ ಒಂದು ರೀತಿಯಲ್ಲಿ ಸಹಕಾರಿ ತತ್ವದ ಪರಿಮಿತಿಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪ್ರೋತ್ಸಾಹಿಸುವ ಸಾಧನವಾಗಿದೆ.

### ಒಕ್ಕೂಟ ವ್ಯವಸ್ಥೆಗಳಲ್ಲಿ ಸದಸ್ಯತ್ವದ ಅನುಕೂಲಗಳು

- ಪ್ರಮಾಣದ ಆರ್ಥಿಕತೆ ಅನುಸಾರ ಹಾಗೂ ಉತ್ಪನ್ನಗಳ ಬ್ರ್ಯಾಂಡಿಂಗ್ ಮಾಡುವ ಮುಖಾಂತರ ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಮೂಲಕ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯಬಹುದಾಗಿದೆ.
- ಉತ್ತಮವಾದ/ಉನ್ನತಮಟ್ಟದ ಮಾರುಕಟ್ಟೆ, ಆರ್ಥಿಕ ಸಹಾಯ ಹಾಗೂ ತಂತ್ರಜ್ಞಾನಗಳನ್ನು ಎಟುಕಿಸಿಕೊಳ್ಳಲು.
- ಮಾರುಕಟ್ಟೆಯಲ್ಲಿ ಇತರೊಡನೆ ಸರ್ಧಾತ್ಮಕವಾಗಿ ವ್ಯವಹರಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು.
- ಪಾಲುದಾರರ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು.
- ಉತ್ತಮ ರೀತಿಯಲ್ಲಿ ವಿವಿಧ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯಲು.
- ರೈತ ಉತ್ಪಾದಕ ಸಂಸ್ಥೆಯ ಸದಸ್ಯರ ಹಿತಾಸಕ್ತಿಗಳ ಬಗ್ಗೆ ಸೂಕ್ತವಾದ ವೇದಿಕೆಯಲ್ಲಿ ಸಮರ್ಥಿಸಿಕೊಳ್ಳಲು ಹಾಗೂ ಕಾಪಾಡಲು ಒಂದು ಸೂಕ್ತವಾದ ವೇದಿಕೆಯಾಗಿ ಕಾರ್ಯನಿರ್ವಹಿಸಲು.
- ಸದಸ್ಯರ ಅರಿವು ಮತ್ತು ಜ್ಞಾನದ ಮಟ್ಟವನ್ನು ಹೆಚ್ಚಿಸಲು.

**ಚಟುವಟಿಕೆ:** ನಮ್ಮ ರೈತ ಉತ್ಪಾದಕ ಸಂಸ್ಥೆಯ ರಚನೆಯ ಬಗ್ಗೆ ಚರ್ಚಿಸಿ ಅಗತ್ಯವಿರುವ ಸುಧಾರಣೆಗಳನ್ನು ಕಂಡು ಕೊಳ್ಳುವುದು.

2

# ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಾಚರಣಾ ತಂತ್ರಗಳು

## ಅಧಿವೇಶನದ ಉದ್ದೇಶ:



ರೈತ ಉತ್ಪಾದಕ ಸಂಸ್ಥೆಗಳ ವಿವಿಧ ಕಾರ್ಯಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಅರಿತುಕೊಳ್ಳುವುದು ಹಾಗೂ ಅವರುಗಳ ಪರಸ್ಪರ ಸಂಬಂಧಗಳ ಬಗ್ಗೆ ತಿಳುವಳಿಕೆ ಪಡೆಯುವುದು.

**ವಿಷಯಗಳ ಪರಿವಿಡಿ**

1. ರೈತಉತ್ಪಾದಕ ಸಂಸ್ಥೆಗಳ ಕಾರ್ಯಚರಣಾಕಾರ್ಯವಿಧಾನ
2. ರೈತಉತ್ಪಾದಕ ಸಂಸ್ಥೆಗಳ ಕಾರ್ಯಕಾರಿಗಳ ಪ್ರಮುಖ ಪಾತ್ರಗಳು ಮತ್ತು ಸಂಬಂಧಗಳು
3. ವಿನ್ಯಾಸದ ಸೂಚಕಗಳು

## ಕಾರ್ಯಚರಣೆಯ ಕಾರ್ಯವಿಧಾನ

ಒಂದು ಉತ್ತಮ ಕಾರ್ಯಚಾರಣೆಯ ಬಗ್ಗೆ ಈ ಕೆಳಗಿನ ಒಂದು ಪ್ರವಸನದಿಂದ ಅರಿತುಕೊಳ್ಳಲು ಪ್ರಯತ್ನಿಸೋಣ.



ಚೈತನ್ಯ ರೈತ ಉತ್ಪಾದಕ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಿವರಾಮ್‌ರವರು ಪ್ರತಿಭಾ ರೈತ ಉತ್ಪಾದಕ ಸಂಸ್ಥೆಯು ಮುಖ್ಯಸ್ತರಾದ ಶ್ರೀಮತಿ ಭಾರತಿಯವರನ್ನು ತಮ್ಮ ಸಂಸ್ಥೆಗೆ ಸ್ವಾಗತಿಸಲು ಎದುರು ನೋಡುತ್ತಿದ್ದಾರೆ, ಕಳೆದ ವರ್ಷ ಪ್ರತಿಭಾ ರೈತ ಉತ್ಪಾದಕ ಸಂಸ್ಥೆಯು ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಸಂಸ್ಥೆ ಎಂದು ಪ್ರಶಸ್ತಿಯನ್ನು ಪಡೆದಿದೆ. ಈ ಹಿನ್ನಲೆಯಲ್ಲಿ ಅವರ ಅನುಭವಗಳನ್ನು ಚೈತನ್ಯ ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರೊಡನೆ ಹಂಚಿಕೊಳ್ಳಲು ಆಹ್ವಾನಿಸಲಾಗಿದೆ.

ಶ್ರೀಮತಿ ಭಾರತಿಯವರ ಆಗಮನಕ್ಕೆ ಮುನ್ನವೆ ಚೈತನ್ಯ ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಹಾಜರಿದ್ದು ಅವರೊಡನೆ ಸಂಹವನ ನಡೆಸಲು ಖಾತರತೆಯಿಂದ ಕಾಯುತ್ತಿದ್ದಾರೆ. ಶ್ರೀಮತಿ ಭಾರತಿಯವರು ಆಗಮನದ ನಂತರ ಶ್ರೀ ಶಿವರಾಮ್‌ರವರು ಅವರನ್ನು ಆರ್ಥಿಕವಾಗಿ ಸ್ವಾಗತಿಸಿ ಅವರ ಪರಿಚಯವನ್ನು ಇತರೆ ಆಡಳಿತ ಮಂಡಳಿಯ ಸದಸ್ಯರಿಗೆ ಮಾಡಿಕೊಡುತ್ತಾರೆ. ಶ್ರೀಮತಿ ಭಾರತಿಯವರು ಕಳೆದ ಮೂರು ವರ್ಷಗಳಿಂದ ಪ್ರತಿಭಾ ರೈತ ಉತ್ಪಾದಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕಳೆದ ಒಂದು ವರ್ಷದಿಂದ ಸಂಸ್ಥೆಯ ಮುಖ್ಯಸ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹಾಜರಿದ್ದ ಮಂಡಳಿಯ ಸದಸ್ಯರನ್ನು ಉದ್ದೇಶಿಸಿ ಮೊದಲನೆಯದಾಗಿ ಅವರು ತಮ್ಮ ರೈತ ಉತ್ಪಾದಕ ಸಂಸ್ಥೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಮುಂದುವರೆದು ನಮ್ಮ ಸಂಸ್ಥೆಯ ಆಡಳಿತ ಮಂಡಳಿಯ ಸಭೆಗಳಲ್ಲಿ ಅಗತ್ಯವಿರುವ ಕೋರಮ್‌ಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ನಿಯಮಿತವಾಗಿ ಭಾಗವಹಿಸುತ್ತಾರೆ ಎಂಬುದರ ಬಗ್ಗೆ ತಿಳಿಸಿದರು. ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಲ್ಲಾ ಸದಸ್ಯರು ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುವುದರ ಜೋತೆಗೆ ಮತದಾನದಲ್ಲಿಯೂ ಸಹ ಪಾಲ್ಗೋಳ್ಳುತ್ತಾರೆ ಎಂದು ತಿಳಿಸಿದರು. ಸದಸ್ಯರ ಸಾಮೂಹಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದರ ಜೋತೆಗೆ, ನಾವು ಸಮಕ್ಕೆ ಸರಿಯಾಗಿ ಸಂಸ್ಥೆಯ ಸಾಮಾನ್ಯ ಸಭೆಯನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದು ಸಂಸ್ಥೆಯ ವಾರ್ಷಿಕ ಪ್ರಗತಿಯ ವರದಿಯನ್ನು ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಸಲ್ಲಿಸುತ್ತದೆ ಎಂದು ತಿಳಿಸಿದರು.

ಆಡಳಿತ ಮಂಡಳಿಯ ಸದಸ್ಯರುಗಳು ನಿರಂತರವಾಗಿ ತಮ್ಮ ಪ್ರದೇಶದ ಸದಸ್ಯರೊಡನೆ ಒಡನಾಟವನ್ನು ಇಟ್ಟುಕೊಂಡು ಸಂಸ್ಥೆಯ ಆಗುಹೊಗುಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ. ನಾವು ಆಡಳಿತ ಮಂಡಳಿಯ ಸಭೆಗಳ ನಡಾವಳಿಗಳನ್ನು ದಾಖಲೆ ಮಾಡುತ್ತೇವೆ ಹಾಗೂ ಆ ದಾಖಲೆಗಳು ಎಲ್ಲಾ ಸದಸ್ಯರಿಗೂ ಮತ್ತು ಆಡಳಿತ ಮಂಡಳಿಯ ಸದಸ್ಯರಿಗೂ ಯಾವಾಗಲೂ ಲಭ್ಯವಿರುತ್ತವೆ ಎಂದು ತಿಳಿಸಿದರು. ಅಲ್ಲದೆ ಅತಿ ಮುಖ್ಯವಾದ ವಿಚಾರವೆಂದರೆ ನಮ್ಮ ಸಂಸ್ಥೆಯು ನಿಯಮಿತವಾಗಿ ಆಂತರಿಕ ಹಾಗೂ ಶಾಸನ ಬದ್ಧ ಲೆಕ್ಕಪರಿಶೋಧನೆಯನ್ನು ಮಾಡಿಸುತ್ತಿದ್ದು ಲೆಕ್ಕಪರಿಶೋಧಕರ ಶಿಫಾರಸ್ಸುಗಳನ್ನು ತಪ್ಪದೆ ಅನುಸರಣೆ ಮಾಡಲಾಗುತ್ತಿರುವ ಬಗ್ಗೆ ಒತ್ತಿ ಹೇಳಿದರು.

ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಶಿವರಾಮ್‌ರವರು ನಿಮ್ಮ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸದಸ್ಯರು ಪ್ರಮುಖವಾದ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳಿದರು, ತೆಗೆದುಕೊಳ್ಳುತ್ತಿದ್ದರೆ ಸಂಸ್ಥೆಯು ಇತರ ಸಿಬ್ಬಂದಿಗಳ ಪಾತ್ರವೇನು? ಎಂದು ಪ್ರಶ್ನಿಸಿದರು.

ಉತ್ತರಿಸುತ್ತಾ ಶ್ರೀಮತಿ ಭಾರತಿಯವರು ತಿಳಿಸಿದರು, ಸಿಬ್ಬಂದಿಗಳನ್ನು ಆಡಳಿತ ಮಂಡಳಿ ನೇಮಿಸುತ್ತದೆ ಹಾಗೂ ಅವರು ಆಡಳಿತ ಮಂಡಳಿಗೆ ಜವಬ್ದಾರರಾಗಿರುತ್ತಾರೆ. ಆಡಳಿತ ಮಂಡಳಿಯ ಅವರಿಗೆ ಅಧಿಕಾರವನ್ನು ನಿಯೋಜಿಸದಿದ್ದರೆ ಅವರುಗಳು ಯಾವ ತಿರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆಡಳಿತ ಮಂಡಳಿಯ ನಿರ್ದೇಶನದ ಮೇರೆಗೆ ನಮ್ಮ ಸಂಸ್ಥೆಯ ಸದಸ್ಯರಿಗೆ ಗುಣಮಟ್ಟದ, ಸಮಯೋಚಿತ ಮತ್ತು ಸಮರ್ಪಕ ಸೇವೆಗಳನ್ನು ಒದಗಿಸುತ್ತಾರೆ. ಆಡಳಿತ ಮಂಡಳಿಯು ಸಿಬ್ಬಂದಿಗಳ ಬೆಂಬಲದೊಂದಿಗೆ ವ್ಯವಹಾರ ನಿಯಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಸದಸ್ಯರೈತರಿಗೆ ಸೇವೆಗಳನ್ನು ನೀಡುತ್ತಿದೆ ಎಂದು ವಿವರಿಸಿದರು.

## ಪ್ರಮುಖ ಕಾರ್ಯಕಾರಿಗಳು ಮತ್ತು ಪರಸ್ಪರ ಸಂಬಂಧಗಳು

ಶ್ರೀಮತಿ ಭಾರತಿಯವರು ವಿವರಿಸುತ್ತ ಯಾವುದೇ ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯರು, ನಿರ್ದೇಶಕರ ಮಂಡಳಿ ಮತ್ತು ಸಿಬ್ಬಂದಿಗಳು ಸಂಸ್ಥೆಯ ನಿರ್ವಹಣೆಯ ಪ್ರಮುಖ ಘಟಕಗಳು, ರೈತ ಉತ್ಪಾದಕ ಸಂಸ್ಥೆಗಳ ಯಶಸ್ಸಿಗೆ ಈ ಮೂವರ ನಡುವಿನ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಖಾತರಿ ಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ತಿಳಿಸಿದರು. ನಂತರ ಅವರು ಒಂದು ಚಾರ್ಟ್‌ಅನ್ನು ಪ್ರದರ್ಶಿಸಿ ಮೂರು ಕಾರ್ಯಕಾರಿಗಳ ನಡುವಿನ ಸಂಬಂಧವನ್ನು ವಿವರಿಸಲು ಪ್ರಾರಂಭಿಸಿದರು.


ಚಿತ್ರದಲ್ಲಿ ತೋರಿಸಿರುವಂತೆ ಸರ್ವಸದಸ್ಯರ ಸಾಮಾನ್ಯ ಸಭೆಯು ರೈತ ಉತ್ಪಾದಕ ಸಂಸ್ಥೆಗಳ ಸರ್ವೋಚ್ಚ ಅಂಗವಾಗಿರುತ್ತದೆ, ಸಮಾನ್ಯ ಸಭೆಯು ಆಡಳಿತ ಮಂಡಳಿಯನ್ನು ಆಯ್ಕೆಮಾಡುತ್ತದೆ. ಆದುದರಿಂದ ಆಡಳಿತ ಮಂಡಳಿಯು ತನ್ನ ಸದಸ್ಯರ ಹಿತಾಸಕ್ತಿಗಳ ಅನುಗುಣವಾಗಿ ಪಾರದರ್ಶಕತೆಯಿಂದ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಸಿಬ್ಬಂದಿಗಳನ್ನು ಆಡಳಿತ ಮಂಡಳಿ ಆಯ್ಕೆ ಮಾಡುವುವದರಿಂದ ಅವರುಗಳು ಆಡಳಿತ ಮಂಡಳಿಗೆ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಆಡಳಿತ ಮಂಡಳಿಯ ತನ್ನ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಅಳೆಯಲು ಮೌಲ್ಯಮಾಪನಗಳನ್ನು ನಿರ್ಧರಿಸುತ್ತದೆ ಹಾಗೂ ಮೌಲ್ಯಮಾಪನದ ಆಧಾರದ ಮೇಲೆ ಪ್ರತಿಫಲವನ್ನು ನೀಡುತ್ತವೆ.

ಆಡಳಿತ ಮಂಡಳಿಯ ಅಧೀನದಲ್ಲಿ ಮಂಡಳಿಯ ನಿರ್ದೇಶನದಂತೆ ವಿವಿಧ ಸೇವೆಗಳನ್ನು ಸದಸ್ಯರಿಗೆ ಒದಗಿಸುವುವದು ಸಿಬ್ಬಂದಿಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ. ಸಂಸ್ಥೆಯ ಸದಸ್ಯರುಗಳು ಸಹ ಸಂಸ್ಥೆಯು ನೀಡುವ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಮುಖಾಂತರ ಸಂಸ್ಥೆಯ ಬೆಳವಣಿಗೆಗೆ ಸಹಕರಿಸುವುದು ಸದಸ್ಯರ ಜವಾಬ್ದರಿಯಾಗಿದೆ.

### ಕಾರ್ಯಕಾರಿಗಳ ಜವಾಬ್ದಾರಿಯ ಸೂಚಕಗಳು

ಕೊನೆಯದಾಗಿ ಶ್ರೀಮತಿ ಭಾರತಿಯವರು ಚಾರ್ಟ್‌ನಲ್ಲಿ ವಿವರಿಸಿದಂತೆ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ನಿರ್ವಹಿಸಬೇಕಾಗಿರುವ ಕೆಲಸಗಳು ಹಾಗೂ ಅವರುಗಳ ನಡುವಿನ ಸಂಬಂಧಗಳನ್ನು ಖಚಿತಪಡಿಸಿಕೊಳ್ಳಲು ತಿಳಿಸಿದರು. ಇಲ್ಲಿಯವರೆಗಿನ ಚರ್ಚೆಗಳನ್ನು ಕ್ರೋಢಿಕರಿಸಿ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವ ಸೂಚಕಗಳ ಅನುಸಾರ ಕಾರ್ಯನಿರ್ವಹಿಸುವುದು ಮುಖ್ಯವೆಂದು ತಿಳಿಸಿದರು.

# ರೈತ ಉತ್ಪಾದಕ ಕಂಪನಿಗಳ ಕಾರ್ಯಾಚರಣೆಯ ಕಾರ್ಯವಿಧಾನ



# ವಿನ್ಯಾಸದ ಸೂಚಕಗಳು

| ಕಾರ್ಯಕಾರಿ | ಸೂಚಕ |
|---|---|
| **ಸದಸ್ಯರು ಮತ್ತು ಆಡಳಿತ ಮಂಡಳಿ** | |
| 1 | ಬೈಲಾಗಳ ರಚನೆ ಮತ್ತು ತಿದ್ದುಪಡಿ |
| 2 | ನಿಯಮಿತವಾಗಿ ಆಡಳಿತ ಮಂಡಳಿಯ ಚುನಾವಣೆ |
| 3 | ವಾರ್ಷಿಕ ವರದಿಗಳು |
| 4 | ಲೆಕ್ಕ ಪರಿಶೋಧನೆಗಳು |
| 5 | ನಿಯಮಿತವಾಗಿ ಮತ್ತು ಪರಿಣಾಮಕಾರಿ ಸಾಮಾನ್ಯ ಸಭೆಗಳನ್ನು ನಡೆಸುವುದು. |
| 6 | ಸರಿಯಾದ ಲೆಕ್ಕ ಪುಸ್ತಕಗಳ ನಿರ್ವಹಣೆ |
| **ಆಡಳಿತ ಮಂಡಳಿ ಮತ್ತು ಸಿಬ್ಬಂದಿ** | |
| 1 | ಸಿಬ್ಬಂದಿ/ ಸಿಇಒ ನೇಮಕಾತಿ |
| 2 | ಸಿಬ್ಬಂದಿ/ ಸಿಇಒಗಳಿಂದ ವರದಿ ಸಲ್ಲಿಸುವಿಕೆ ಮತ್ತು ಕಾರ್ಯಕ್ಷಮತೆಯ ಮೌಲ್ಯಮಾಪನ |
| 3 | ವಾರ್ಷಿಕ ಯೋಜನೆ ಮತ್ತು ಕಾರ್ಯಕ್ಷಮತೆಯ ಸೂಚಕಗಳು |
| 4 | ಕಾರ್ಯಕ್ಷಮತೆಯ ಆಧಾರದ ಮೇಲೆ ಪ್ರೋತ್ಸಾಹ/ ಪ್ರೋತ್ಸಾಹ ಹಿಂತೆಗೆದುಕೊಳ್ಳುವಿಕೆ |
| **ಸದಸ್ಯರು ಮತ್ತು ಸಿಬ್ಬಂದಿ** | |
| 1 | ಸಮಯೋಚಿತವಾಗಿ ಗುಣಮಟ್ಟ ಅಗತ್ಯ ಸೇವೆಗಳನ್ನು ನೀಡುವುದು |
| 2 | ಸದಸ್ಯರಿಂದ ಸೇವೆಗಳ ಬಳಕೆ |
| 3 | ಸದಸ್ಯ ಕೇಂದ್ರೀತವಾದ ವ್ಯವಸ್ಥೆ |
| 4 | ವ್ಯಾಪಾರ ಯೋಜನೆ |
| 5 | ವ್ಯವಹಾರ ನಿಯಮಗಳು |
| 6 | ಸೇವೆಗಳ ಖಾತೆ |

## ಚಟುವಟಿಕೆ

ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ವಿನ್ಯಾಸ ಹಾಗೂ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ನಡುವಿನ ಪರಸ್ಪರ ಸಂಬಂಧಗಳ ಕುರಿತು ಚರ್ಚೆಯ ಆಧಾರದ ಮೇಲೆ, ನಾವು ಈ ಕೆಳಗಿನ ಸನ್ನಿವೇಶಗಳಿಗೆ 1 ರಿಂದ 5 ರ ವರೆಗೆ ಅಂಕಗಳನ್ನು ನೀಡಬೇಕು ಹಾಗೂ ನೀಡಿದ ಅಂಕಗಳ ಅನ್ವಯ ಕಾರಣವನ್ನು ನೀಡಬೇಕು.

1. ತುಂಬಾ ಕಳಪೆ 2. ಕಳಪೆ 3. ಸರಾಸರಿ 4. ಉತ್ತಮ 5. ಅತ್ಯುತ್ತಮ

1.ಸಹಕಾರಿ ಸಂಘಗಳಲ್ಲಿ ಆಡಳಿತ ಮಂಡಳಿಯು ತನ್ನ ಸಿಬ್ಬಂದಿಗಳಿಗೆ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ ಹಾಗೂ ಅವರ ಕಾರ್ಯಕ್ಷಮತೆಯನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

1. ತುಂಬಾ ಕಳಪೆ 2. ಕಳಪೆ 3. ಸರಾಸರಿ 4. ಉತ್ತಮ 5. ಅತ್ಯುತ್ತಮ

ವಿವರಣೆ:

2.ರೈತಉತ್ಪಾದಕ ಸಂಸ್ಥೆವೊಂದರಲ್ಲಿ ಅಧ್ಯಕ್ಷರು ಮತ್ತು ಸಿಇಒ ಕೈ ಜೋಡಿಸಿ ತಮ್ಮ ಸ್ವಂತ ಹಿತಾಸಕ್ತಿಗಾಗಿ ಎಲ್ಲರನ್ನು ಬದಿಗೋತ್ತಿ ವ್ಯವಹಾರಗಳ ಮೇಲೆ ಹಿಡಿತ ಸಾಧಿಸುತ್ತಾರೆ ಮತ್ತು ಪರಸ್ಪರ ವರದಿ ಮಾಡುತ್ತಾರೆ

1. ತುಂಬಾ ಕಳಪೆ 2. ಕಳಪೆ 3. ಸರಾಸರಿ 4. ಉತ್ತಮ 5. ಅತ್ಯುತ್ತಮ

ವಿವರಣೆ:

3.ಒಂದು ರೈತ ಉತ್ಪಾದಕ ಸಂಸ್ಥೆಯಲ್ಲಿ ತನ್ನ ಸದಸ್ಯರಿಗೆ ಅಗತ್ಯವಿರುವ ಸೇವೆಗಳನ್ನು ಅತ್ಯಂತ ಗುಣಾತ್ಮಕವಾಗಿ ಹಾಗೂ ಸಮಯಕ್ಕೆ ಸರಿಯಾಗಿ ನೀಡುವುದರಿಂದ ಸದಸ್ಯರು ಇತರೆ ಸೇವೆ/ ಪರಿಕರ ಪೂರೈಕೆದಾರರ ಕಡೆಗೆ ಹೊಗುವುದಿಲ್ಲ

1. ತುಂಬಾ ಕಳಪೆ 2. ಕಳಪೆ 3. ಸರಾಸರಿ 4. ಉತ್ತಮ 5. ಅತ್ಯುತ್ತಮ

ವಿವರಣೆ:

# 3

# ಪಾತ್ರಗಳು ಮತ್ತು ಜವಾಬ್ದಾರಿಗಳು

## ಅಧಿವೇಶನದ ಉದ್ದೇಶ:



ಕಾರ್ಯಕಾರಿಗಳಿಂದ ಆಯಾ ಪಾತ್ರಗಳ ಕಾರ್ಯಕ್ಷಮತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ರೈತಉತ್ಪಾದಕ ಸಂಸ್ಥೆಯಲ್ಲಿ ವಿವಿಧ ಕಾರ್ಯಕಾರಿಗಳ ಪಾತ್ರಗಳ ಬಗ್ಗೆ ಸ್ಪಷ್ಟತೆಯ ಅರಿವು ಮೂಡಿಸುವುದು.

**ವಿಷಯ ಪರಿವಿಡಿ**

1.ಪಾತ್ರದ ಸ್ಪಷ್ಟತೆ ಮತ್ತು ಪಾತ್ರದ ಕಾರ್ಯಕ್ಷಮತೆಯ ಮಹತ್ವ.

2.ಸರ್ವ ಸದಸ್ಯರ ಸಭೆಯ ಅಧಿಕಾರಗಳು

3.ನಿರ್ದೇಶಕರ ಪಾತ್ರ, ಜವಾಬ್ದಾರಿ ಮತ್ತು ಹೊಣೆಗಾರಿಕೆ

4.ಮುಖ್ಯಕಾರ್ಯನಿರ್ವಣಾಧಿಕಾರಿ/ ಪ್ರಧಾನವ್ಯಸ್ಥಾಪಕರ ಪಾತ್ರಗಳು

5.ಮುಖ್ಯಕಾರ್ಯನಿರ್ವಣಾಧಿಕಾರಿ/ ಪ್ರಧಾನವ್ಯಸ್ಥಾಪಕರ ಹಾಗೂ ಆಡಳಿತ ಮಂಡಳಿಯ ನಡುವಿನ ಪಾತ್ರಗಳ ವ್ಯತ್ಯಾಸ

6.ಅಧ್ಯಕ್ಷರ ಪಾತ್ರ ಮತ್ತು ಜವಾಬ್ದಾರಿ

7.ಕಾರ್ಯದರ್ಶಿಯ ಪಾತ್ರ ಮತ್ತು ಜವಾಬ್ದಾರಿ

ಹಿಂದಿನ ಅಧಿವೇಶನದಲ್ಲಿ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ರೈತ ಉತ್ಪಾದಕ ಸಂಸ್ಥೆಗಳ ಮೂರು ಪ್ರಮುಖ ಕಾರ್ಯ ಘಟಕಗಳೆಂದು ಎಂದು ನಾವು ಅರಿತಿದ್ದೆವೆ. ಈ ಅಧಿವೇಶನದಲ್ಲಿ ಅವರುಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ನೋಡೋಣ. ನಾವೆಲ್ಲರೂ ತಿಳಿದಿರುವಂತೆ ಆಯಾ ಘಟಕಗಳಿಗೆ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆ ಇರುವುದು ಅತ್ಯವಶ್ಯಕ ಉತ್ಪಾದಕ ಸಂಸ್ಥೆಯ ಕಾರ್ಯಚಟುವಟಿಕೆಗಳ ಅನುಷ್ಠಾನದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ನೋಡಿಕೊಳ್ಳಲು ಸಂಸ್ಥೆಯ ವಿಭಿನ್ನ ಘಟಕಗಳು ತಮ್ಮ ಪಾತ್ರಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು.

ವಿವಿಧ ಘಟಕಗಳ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ಪಡೆದುಕೊಳ್ಳಲು ಪ್ರಯತ್ನಿಸೋಣ ಎಂದು ಶ್ರೀಮತಿ ಭಾರತಿರವರು ತಿಳಿಸಿದರು. ಆಡಳಿತ ಮಂಡಳಿಯ ಇನ್ನೊಬ್ಬ ಸದಸ್ಯರಾದ ಶ್ರೀ ಮಂಜುನಾಥರವರು, ಶ್ರೀಮತಿ ಭಾರತಿರವರೆ ಈಗ ನಮಗೆ ಸಂಸ್ಥೆಯ ವಿವಿಧ ಕಾರ್ಯಕಾರಿಗಳ ನಡುವಿನ ಪರಸ್ಪರ ಸಂಬಂಧದ ಬಗ್ಗೆ ಸ್ಪಷ್ಟತೆ ಸಿಕ್ಕಿದೆ. ನಮ್ಮ ಸಂಸ್ಥೆಯ ಸಾಮಾನ್ಯ ಸಭೆಯು ಆಡಳಿತ ಮಂಡಳಿಯ ಕೆಲವು ಜವಾಬ್ದಾರಿಗಳನ್ನು ವಹಿಸಿದೆ, ಅವುಗಳ ಹಿನ್ನಲೆಯಲ್ಲಿ ನಾವು ನಮ್ಮ ಸಂಸ್ಥೆಯನ್ನು ಹೇಗೆ ನಡೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಸ್ಪಷ್ಟತೆ ನೀಡಲು ಕೇಳಿಕೊಳ್ಳುತ್ತಾರೆ.

ಶ್ರೀಮತಿ ಭಾರತಿಯವರು ಉತ್ತರಿಸುತ್ತಾ, ಸಂಸ್ಥೆಯ ಎಲ್ಲಾ ಸದಸ್ಯರನ್ನು ಒಳಗೊಂಡ ಘಟಕಕ್ಕೆ ಸಾಮಾನ್ಯ ಸಭೆಯಂದು ಕರೆಯುತ್ತೇವೆ. ಸಾಮಾನ್ಯ ಸಭೆಯ ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ಅನಿಸಿಕೆಗಳನ್ನು ತಿಳಿಸಲು ಸಮಾನವಾದ ಹಕ್ಕುಗಳಿರುತ್ತವೆ, ಅವರ ಎಲ್ಲ ಅನಿಸಿಕೆಗಳನ್ನು ಸಂಸ್ಥೆಯ ತಿರ್ಮಾನಗಳಲ್ಲಿ ಪರಿಗಣಿಸಬೇಕಾಗಿರುವುದು ಅತ್ಯವಶ್ಯಕ. ತನ್ನ ಸದಸ್ಯರ ಅನಿಸಿಕೆಗಳು ಹಾಗೂ ಅವಶ್ಯಕತೆಗಳ ಅನುಸಾರ ಯೋಜನೆಗಳನ್ನು ರೂಪಿಸಬೇಕು ಹಾಗೂ ಅವುಗಳ ಅನುಷ್ಠಾನದ ಕಾರ್ಯತಂತ್ರಗಳ ಬಗ್ಗೆಯು ಸಹ ಸಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆಯಬೇಕು. ಆದುದರಿಂದ ಸಾಮಾನ್ಯ ಸಭೆಯನ್ನು ಕನಿಷ್ಟ ವರ್ಷಕ್ಕೆ ಒಂದು ಬಾರಿಯಾದರು ಕರೆಯುವುದು ಅನಿವಾರ್ಯ ಹಾಗೂ ಕಡ್ಡಾಯ. ಆ ಸಭೆಯಲ್ಲಿ ಯೋಜನೆಗಳನ್ನು ರೂಪಿಸುವುದರ ಜೋತೆಗೆ ಈ ಹಿಂದಿನ ಯೋಜನೆಗಳ ಅನುಷ್ಠಾನವನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದು ತಿಳಿಸಿದರು.

ನಿಮ್ಮೆಲ್ಲರಿಗೂ ಆಡಳಿತ ಮಂಡಳಿಯ ಬಗ್ಗೆ ಸಂಪೂರ್ಣ ತಿಳುವಳಿಕೆ ಬಂದಿದೆ ಅಂದುಕೊಂಡಿದ್ದೆನೆ, ಆದಾಗ್ಯೂ ಸಹ ನಿಮ್ಮಲ್ಲಿ ಯಾರಾದರೋಬ್ಬರು ಆಡಳಿತ ಮಂಡಳಿ ಏನೆಂದು ವಿವರಿಸಬಹುದೇ? ಎಂದು ಶ್ರೀಮತಿ ಭಾರತಿಯವರು ಪ್ರಶ್ನಿಸಿದರು. ಶ್ರೀಮತಿ ಭಾರತಿಯವರ ಪ್ರಶ್ನೇಗೆ ಉತ್ತರಿಸುತ್ತಾ ಸದಸ್ಯರಲ್ಲೊಬ್ಬರಾದ ಶ್ರೀ ಲಕ್ಷ್ಮಣರವರು ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಯಿಂದ ಸಂಸ್ಥೆಯ ಚಟುವಕೆಗಳನ್ನು ನಡೆಸಿಕೊಂಡು ಹೊಗುವ ದೃಷ್ಟಿಯಿಂದ ಆಯ್ಕೆಯಾದ ಸದಸ್ಯರನ್ನು ಆಡಳಿತ ಮಂಡಳಿ/ನಿರ್ದೇಶಕರ ಮಂಡಳಿ ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು.

ಸಾಮಾನ್ಯ ಸಭೆಯು ನಿರ್ದೇಶಿಸಿದಂತೆ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಬೈಲಾಗಳ/ಎಓಎ ಪರಿಮಿತಿಯಲ್ಲಿ ನೋಂದಾಯಿತ ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು. ರೈತ ಉತ್ಪಾದಕ ಸಂಸ್ಥೆಗಳು ಹಮ್ಮಿಕೋಳುವ ಯಾವುದೇ ಚಟುವಟಿಕೆಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತರಬೇಕು ಮತ್ತು ಅದರ ಅನುಮೋಧನೆಯನ್ನು ಪಡೆಯಬೇಕು. ರೈತ ಉತ್ಪಾದಕ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ಅಂತಿಮ ನಿರ್ಧಾರಗಳನ್ನು ತೆಗೆದುಕೋಳ್ಳುವ ಅಧಿಕಾರವನ್ನು ಸಾಮಾನ್ಯ ಸಭೆ/ಜನರಲ್ ಬಾಡಿ ಮಾತ್ರ ಹೊಂದಿರುತ್ತದೆ.

ರೈತ ಉತ್ಪಾದಕ ಸಂಸ್ಥೆಗಳಲ್ಲಿ ವ್ಯವಹಾರ ನಡೆಸಲು ಸಾಮಾನ್ಯ ಸಭೆ, ನಿರ್ದೇಶಕರ ಮಂಡಳಿ ಮತ್ತು ಸಿಬ್ಬಂದಿಗಳಿಗೆ ಕೆಲವು ಕರ್ತವ್ಯಗಳು ಮತ್ತು ಜವಾಬ್ದಾರಿಗಳಿರುತ್ತವೆ. ಉತ್ತಮ ಮತ್ತು ಸಮರ್ಥ ರೀತಿಯಲ್ಲಿ ವ್ಯವಹಾರವನ್ನು ನಡೆಸಲು ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ನಮಗೆ ಸ್ಪಷ್ಟವಾದ ತಿಳುವಳಿಕೆ ಇದ್ದಾಗ ಮಾತ್ರ ಸಂಸ್ಥೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೊಗಬಹುದು ಹಾಗೂ ಸದಸ್ಯರ ವಿಶ್ವಾಸ ಮತ್ತು ನಂಬಿಕೆಯನ್ನು ಪಡೆಯಬಹುದು ಎಂದು ತಿಳಿಸಿದರು. ಮುಂದುವರೆದು ಈಗ ನಾವು ವಿವಿಧ ಕಾರ್ಯಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡೋಣ ಎಂದು ತಿಳಿಸಿ ಈ ಕೆಳಗಿನ ಪಟ್ಟಿಯನ್ನು ತಯಾರಿಸಿದರು.

# ಸಾಮಾನ್ಯ ಸಭೆ


**ಸಾಮಾನ್ಯ ಸಭೆಯ/ಜವಾಬ್ದಾರಿಗಳನ್ನು ಈ ಕೆಳಗಿನ ಚಿತ್ರದಲ್ಲಿ ನೀಡಲಾಗಿದೆ**




**ಆಡಳಿತ ಮಂಡಳಿ ಸದಸ್ಯರಚನಾವಣೆ /ಆಯ್ಕೆ**




**ಬೈಲಾಗಳ /ಏಓಏಗಳ ತಿದ್ದುಪಡಿ**





**ಭವಿಷ್ಯದ ಯೋಜನೆಗಳ, ನೀತಿಗಳ ಮತ್ತು ಆಯವ್ಯದ ಅನುಮೋದನೆ**




**ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನೆ ವರದಿಗಳ ಅನುಮೋದನೆ**




**ಹೆಚ್ಚುವರಿ ಲಾಭಗಳ ವಿಲೇವಾರಿ ಮತ್ತು ಹಣಕಾಸುಕೊರತೆಯ ನಿರ್ವಹಣೆ**





**ನಿರ್ದಿಷ್ಟ ಮಿಸಲು ನಿಧಿಯಸಂಗ್ರಹಣೆ ಮತ್ತು ನಿಧಿಗಳ ಕ್ರೋಢಿಕರಣ**



**ಲೆಕ್ಕ ಪರಿಶೋಧಕರ ನೇಮಕ**

ಈ ಮೇಲೆ ವಿವರಣೆ ನೀಡಿದಂತೆ ಸರ್ವ ಸದಸ್ಯರ ಸಭೆಯು ರೈತ ಉತ್ಪಾದಕ ಸಂಸ್ಥೆಗಳ ಸರ್ವೋಚ್ಚ ಅಂಗವಾಗಿದ್ದು ಅಗತ್ಯವಿರುವ ಎಲ್ಲಾ ಅಧಿಕಾರವನ್ನು ಹೊಂದಿದೆ ಹಾಗೂ ಸಂಸ್ಥೆಯ ಸದಸ್ಯರ ಮಾಲಿಕತ್ವದ ಸಂಸ್ಥೆಯಾಗಿದೆ. ಸರ್ವ ಸದಸ್ಯರ ಸಭೆಗೆ ಎಲ್ಲಾ ರೀತಿಯ ನಿರ್ಣಾಕ ನಿರ್ಧಾರಗಳನ್ನು ತೆಗೆದುಕೊಳ್ಳುವ, ಧೀರ್ಘಾವಧಿಯ ಯೋಜನೆಗಳನ್ನು ರೂಪಿಸುವ, ಆಡಳಿತ ಮಂಡಳಿಯ ತಿರ್ಮಾಣಗಳನ್ನು ರದ್ದುಗೊಳಿಸುವ, ಸಂಸ್ಥೆಯನ್ನು ವಿಸರ್ಜಿಸುವ ಅಧಿಕಾರವನ್ನು ಹೊಂದಿದೆ.

## ರೈತ ಉತ್ಪಾದಕ ಸಂಸ್ಥೆಯ ನಿರ್ದೇಶಕರ ಮಂಡಳಿಯ ಪಾತ್ರ ಮತ್ತು ಜವಾಬ್ದಾರಿಗಳು.

|  |  |  |
| --- | --- | --- |
| **ಆಡಳಿತಾತ್ಮಕ** | **ಹಣಕಾಸು** | **ಶಾಸನಬದ್ದ** |
| ➢ ಸದಸ್ಯತ್ವ ನೀಡುವುದು ಮತ್ತು ರದ್ದುಪಡಿಸುವುದು | ➢ ನಿಧಿಗಳ ಕ್ರೋಢಿಕರಣ | ➢ ಚನಾವಣೆ ನಡೆಸುವುದು |
| ➢ ಪದಾಧಿಕಾರಿಗಳ ಆಯ್ಕೆ ಮತ್ತು ತೆಗೆಯುವಿಕೆ | ➢ ನಿಧಿಗಳ ಬಳಕೆ | ➢ ಲೆಕ್ಕಪರಿಶೋಧನೆ |
| ➢ ನೀತಿ ಮತು ಯೋಜನೆಯನ್ನು ರೂಪಿಸುವುದು | ➢ ಸ್ವತ್ತುಗಳ ಮತ್ತು ನಿಧಿಗಳ ಸುರಕ್ಷಿತ ಪಾಲನೆ | ➢ ವಾರ್ಷಿಕ ವರದಿಗಳ ಸಲ್ಲಿಕೆ |
| ➢ ವಿವಿಧ ಸಮಿತಿಗಳ ಮತ್ತು ಉಪ ಸಮಿತಿಗಳ ರಚನೆ | ➢ ಬ್ಯಾಂಕ್‌ಖಾತೆಯ ನಿರ್ವಹಣೆ | ➢ ಬೈಲಾಗಳಿಗೆ ತಿದ್ದುಪಡಿ |
| ➢ ಸಿಬ್ಬಂದಿ ನೇಮಕ ಮತ್ತು ಅವರ ಕಾರ್ಯಕ್ಷಮತೆಯ ಪರಿಶೀಲನೆ | ➢ ಲೆಕ್ಕ ಪತ್ರಗಳ ಮತ್ತು ಇತರೆ ದಾಖಲಾತಿಗಳ ನಿರ್ವಹಣೆ | ➢ ಸಭೆಗಳನ್ನು ನಡೆಸುವುದು – ಸಾಮಾನ್ಯ ಸಭೆ, ಆಡಳಿತ ಮಂಡಳಿಯ ಸಭೆ |
| ➢ ಇತರ ಸಂಸ್ಥೆಗಳ/ಸಂಘಗಳ ಮತ್ತು ಒಕ್ಕೂಟಗಳಲ್ಲಿ ಸದಸ್ಯತ್ವದ ನಿರ್ಣಯ | ➢ ಹೆಚ್ಚುವರಿ ಲಾಭಾಂಶಗಳ ಹಂಚಿಕೆ | |
| | ➢ ಹಣಕಾಸಿನ ನಿರ್ವಹಣೆ | |
| | ➢ ಹಣಕಾಸಿನ ಕೊರತೆ ನಿರ್ವಹಣೆ | |

# ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ/ ವ್ಯವಸ್ಥಾಪಕರ ಪಾತ್ರ

ರೈತ ಉತ್ಪಾದಕ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ ವ್ಯವಸ್ಥಾಪಕರ ಪಾತ್ರ ಮತ್ತು ಜವಾಬ್ದಾರಿಗಳನ್ನು ಈ ಕೆಳಗೆ ನೀಡಲಾಗಿದೆ.

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರೈತಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಗೆ ಜವಾಬ್ದಾರರಾಗಿರುತ್ತಾರೆ



- ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮಂಡಳಿಗೆ ಗುರಿಗಳನ್ನು ನಿಗದಿಪಡಿಸಲು, ಗುರಿಗಳ ಅನುಸಾರ ಯೋಜನೆಗಳನ್ನು ರೂಪಿಸಲು ಮತ್ತು ಅನುಷ್ಠಾನದ ಕಾರ್ಯತಂತ್ರಗಳನ್ನು ರೂಪಿಸಲ ಸಹಾಯ ಮಾಡುವುದು.

- ಆಡಳಿತ ಮಂಡಳಿಯ ನಿರ್ದೇಶನದಂತೆ ವಿವಿಧ ಕಾನೂನು ಅನುಸರಣೆಗಳಾದ ಆಡಳಿತ ಮಂಡಳಿಯ ಸಭೆ, ಸರ್ವಸದಸ್ಯರ ಸಾಮಾನ್ಯ ಸಭೆ, ಲೆಕ್ಕ ಪತ್ರಗಳ ನಿರ್ವಹಣೆ, ಲೆಕ್ಕ ಪರಿಶೋಧನೆ, ವಾರ್ಷಿಕ ಲೆಕ್ಕ ಪತ್ರಗಳ ಸಲ್ಲಿಕೆ ಮುಂತಾದ ಕಾರ್ಯಗಳನ್ನು ನಿರ್ವಹಿಸುವುದು.

- ಆಡಳಿತ ಮಂಡಳಿ ಮತ್ತು ಇತರೆ ಬಾಹ್ಯ ಸಂಸ್ಥೆಗಳಿಗೆ ಸಲ್ಲಿಸಬೇಕಾಗಿರುವ ವರದಿಗಳನ್ನು ತಯಾರಿಸುವುದು ಮತ್ತು ಸಲ್ಲಿಸುವುದು.

- ರೈತ ಉತ್ಪಾದಕ ಸಂಸ್ಥೆಯ ದಿನ ನಿತ್ಯದ ವ್ಯವಹಾರಗಳನ್ನು ನಿರ್ವಹಿಸುವುದು.

- ಆಡಳಿತ ಮಂಡಳಿಯಿಂದ ನಿಯೋಜಿಸಬಹುದಾದ ಇತರೆ ಕಾರ್ಯಗಳನ್ನು ನಿರ್ವಹಿಸುವುದು

2. ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ರೈತ ಉತ್ಪಾದಕ ಸಂಸ್ಥೆ ಸದಸ್ಯರಿಗೆ ಸೇವೆಗಳನ್ನು ಪೂರೈಸುವುದು



- ರೈತ ಉತ್ಪಾದಕ ಸಂಸ್ಥೆಯ ವ್ಯವಹಾರಕ್ಕೆ ಹಾಗೂ ಸದಸ್ಯರ ಕಲ್ಯಾಣಕ್ಕಾಗಿ ಲಭ್ಯವಿರುವ ಅವಕಾಶಗಳನ್ನು ಗುರಿತಿಸುವುದು, ವ್ಯವಹಾರ ಯೋಜನೆಯ ಅಭಿವೃದ್ಧಿ ಮತ್ತು ಅನುಷ್ಠಾನ.
- ಮಂಡಳಿ ನಿರ್ದೇಶನದಂತೆ ಸದಸ್ಯರಿಗೆ ವಿಭಿನ್ನ ಸೇವೆಗಳನ್ನು ಒದಗಿಸುವುದು
- ಸದಸ್ಯರಿಗೆ ಮಾಹಿತಿ, ತರಬೇತಿ ಮತ್ತು ದೃಷ್ಟಿಕೋನ ನಿಡುವುದು.
- ರೈತ ಉತ್ಪಾದಕ ಸಂಸ್ಥೆಗಳಿಗೆ ಹಣಕಾಸಿನ ಮತ್ತು ತಾಂತ್ರಿಕ ಸಂಪನ್ಮೂಲ ಕ್ರೋಡಿಕರಣ.
- ರೈತ ಉತ್ಪಾದಕ ಸಂಸ್ಥೆಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಹಾಗೂ ದೊರೆಯುವಂತೆ ನೊಡಿಕೊಳ್ಳವುದು.

3. ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಅನುಸರಣೆ



- ಸರಿಯಾದ ರೀತಿಯಲ್ಲಿ ಹಣಕಾಸಿನ ಖಾತೆಯ ಪುಸ್ತಕಗಳನ್ನು ನಿರ್ವಹಿಸುವುದು, ವಾರ್ಷಿಕ ಹಣಕಾಸು ವರದಿಯನ್ನು ಸಿದ್ಧಪಡಿಸುವುದು, ಲೆಕ್ಕಪರಿಶೋಧನೆ ಮಾಡಿಸುವುದು ಮತ್ತು ಅವುಗಳನ್ನು ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೊದನೆ ತಗೆದುಕೊಳ್ಳುವುದು.

- ಆಡಳಿತ ಮಂಡಳಿಯ ನಿರ್ದೇಶನದ ಮೇರೆಗೆ ಸಿಬ್ಬಂದಿಯನ್ನು ನೇಮಕಾತಿ ಮಾಡಿ ಅವರ ಕೆಲಸಗಳ ಮೇಲ್ವಿಚಾರಣೆ ಮಾಡುವುದು

- ರೈತ ಉತ್ಪಾದಕ ಸಂಸ್ಥೆಯ ನಿರ್ವಹಣೆಗೆ ಅಗತ್ಯವಿರುವ ವಿವಿಧ ವ್ಯವಸ್ಥೆಗಳಾದ ಲೆಕ್ಕಪತ್ರ ಹಾಗು ಲೆಕ್ಕಪತ್ರ ಪುಸ್ತಕಗಳ ನಿರ್ವಹಣೆ, ಉಸ್ತುವಾರಿ, ವರದಿ ಮಾಡುವುದು, ಉತ್ಪಾದನೆ, ಮಾರ್ಕೆಟಿಂಗ್, ಆಡಳಿತ, ಮಾನವ ಸಂಪನ್ಮೂಲ ನೀತಿ ಇತ್ಯಾದಿಗಳನ್ನು ಸ್ಥಾಪಿಸಿ ಕಾರ್ಯಗತಗೊಳಿಸುವುದು.

- ಬೆಂಬಲ ನೀಡುತ್ತಿರುವ ಬಾಹ್ಯ ಸಂಸ್ಥೆಗಳು, ಪಾಲುದಾರರು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ವ್ಯವಹರಿಸುವುದು.

## ಪಾತ್ರಗಳಲ್ಲಿ ಭಿನ್ನತೆಯನ್ನು ಗುರುತಿಸುವುದು

ನಂತರ ಶ್ರೀಮತಿ ಭಾರತಿ ಈ ಹಿಂದೆ ಚರ್ಚೆಸಿದಂತೆ, ಮುಖ್ಯಕಾರ್ಯನಿರ್ವಹಣಾಧಿಕಾರಿ/ ಪ್ರಧಾನ ವ್ಯವಸ್ಥಾಪಕ ಹಾಗೂ ಆಡಳಿತ ಮಂಡಳಿಯ ಪಾತ್ರಗಳ ಭಿನ್ನತೆಯನ್ನು ಅರ್ಥಮಾಡಿಕೊಳ್ಳುವ ಅಗತ್ಯತೆಯನ್ನು ತಿಳಿಸುತ್ತಾ, ಇದು ಒಂದು ಅತಿ ಸೂಕ್ಷ್ಮವಾದ ವಿಷಯ ಅವರ ಅವರ ಪಾತ್ರಗಳ ಬಗ್ಗೆ ಸ್ಪಷ್ಟತೆಯಿರಬೇಕು, ಸ್ಪಷ್ಟತೆಯ ಕೊರತೆ ಇದ್ದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಕಷ್ಟವಾಗುತ್ತದೆ. ಹೀಗಾಗಿ, ನಿರ್ದೇಶಕರ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಣಾಧಿಕಾರಿಗಳ ನಡುವಿನ ಪಾತ್ರಗಳ ವಿಭಿನ್ನತೆಯನ್ನು ಈ ಕೆಳಗಿನಂತೆ ಪಟ್ಟಿಮಾಡಿದರು;



**ಪಾತ್ರಗಳಲ್ಲಿ ಭಿನ್ನತೆಯನ್ನು ಗುರುತಿಸುವುದು**








| ನಿರ್ದೇಶಕರು | ಮುಖ್ಯಕಾರ್ಯನಿರ್ವಣಾಧಿಕಾರಿ/ ಪ್ರಧಾನ ವ್ಯವಸ್ಥಾಪಕರು |
|---|---|
| • ನಿರ್ದೇಶನ ನಿಡುವುದು | • ಆಡಳಿತ ಮಂಡಳಿಯ ನಿರ್ದೇಶನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವುದು |
| • ಕಾರ್ಯತಂತ್ರದ ಬಗ್ಗೆ ದೃಷ್ಟಿಕೋನ ನೀಡುವುದು | • ಕಾರ್ಯಾಚರಣೆಯ ನಿರ್ದೇಶನ |
| • ಸಾಂಸ್ಥಿಕ ನೀತಿಗಳನ್ನು ರಚಿಸುವುದು | • ಸಾಂಸ್ಥಿಕ ನೀತಿಗಳನ್ನು ಕಾರ್ಯಗತಗೊಳಿಸುವುದು |
| • ಸರ್ವಸದಸ್ಯರ ಸಾಮಾನ್ಯ ಸಭೆಗೆ ಜವಾಬ್ದಾರರು | • ಆಡಳಿತ ಮಂಡಳಿಗೆ ವರದಿ ಮಾಡಿಕೋಳ್ಳುವುದು |
| • ಸದಸ್ಯರಿಗೆ ಅಗತ್ಯವಿರುವ ಸೇವೆಗಳನ್ನು ಗುರುತಿಸುವುದು | • ಸದಸ್ಯರಿಗೆ ಸೇವೆಗಳನ್ನು ಒದಗಿಸುವುದು |
| • ಮುಖ್ಯಕಾರ್ಯನಿರ್ವಣಾಧಿಕಾರಿಯ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು | • ಮಂಡಳಿಯ ನಿರ್ದೇಶನದಂತೆ ಇತರ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು |



ಸಂಕ್ಷೀತ್ತವಾಗಿ ಹೇಳುವುದಾದರೆ, ನಿರ್ದೇಶಕರುಗಳು ಸಂಸ್ಥೆಯ ನೀತಿಗಳು, ಯೋಜನೆಗಳು ಹಾಗೂ ಅನುಷ್ಠಾನದ ಕಾರ್ಯತಂತ್ರಗಳನ್ನು ನಿಗಧಿಪಡಿಸಿದರೆ ಸಿಬ್ಬಂದಿ ವರ್ಗದವರು ಅವುಗಳನ್ನು ಅನುಷ್ಠಾನ ಮಾಡುವಲ್ಲಿ ಆಡಳಿತ ಮಂಡಳಿಯ ಜವಾಬ್ದಾರಾಗಿರುತ್ತಾರೆ.

# ಚಟುವಟಿಕೆ

ಈ ಕೆಳಗಿನ ಪ್ರತಿಯೊಂದು ಚಟುವಟಿಕೆಗಳಿಗೆ ಯಾರು ಜವಾಬ್ದಾರರು ಎಂಬುದನ್ನು ಗುರುತಿಸಿ

| ಚಟುವಟಿಕೆ | ಸರ್ವ ಸದಸ್ಯರ ಸಾಮಾನ್ಯ ಸಭೆ | ಆಡಳಿತ ಮಂಡಳಿ | ಸಂಸ್ಥೆಯ ಸಿಬ್ಬಂದಿ |
|---|---|---|---|
| 1. ಸದಸ್ಯರ ದಾಖಲಾತಿ   | | | |
| 2. ಸಾಮಾನ್ಯ ಸಭೆ ನಡೆಸುವುದು  | | | |
| 3. ಲೆಕ್ಕ ಪರಿಶೋಧಕರ ನೇಮಕ  | | | |
| 4. ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡಲು ಮತದಾನ  | | | |

| ಚಟುವಟಿಕೆ | ಸರ್ವ ಸದಸ್ಯರ ಸಾಮಾನ್ಯ ಸಭೆ | ಆಡಳಿತ ಮಂಡಳಿ | ಸಂಸ್ಥೆಯ ಸಿಬ್ಬಂದಿ |
|---|---|---|---|
| **5. ವಾರ್ಷಿಕ ಯೋಜನೆಗಳ ಅನುಮೋದನೆ**   | | | |
| **6. ಲೆಕ್ಕ ಪರಿಶೋದಿತ ಹಣಕಾಸು ವರದಿಗಳ ಅನುಮೋದನೆ**   | | | |
| **7. ವಾರ್ಷಿಕ ವರದಿಗಳ ಸಲ್ಲಿಕೆ**   | | | |
| **8. ಕಾನೂನು ಅನುಸರಣೆ**  | | | |

| ಚಟುವಟಿಕೆ | ಸರ್ವ ಸದಸ್ಯರ ಸಾಮಾನ್ಯ ಸಭೆ | ಆಡಳಿತ ಮಂಡಳಿ | ಸಂಸ್ಥೆಯ ಸಿಬ್ಬಂದಿ |
|---|---|---|---|
| **9.** ಹಣಕಾಸು ಖಾತೆಗಳ ಪುಸ್ತಕಗಳ ಸರಿಯಾದ ನಿರ್ವಹಣೆ  | | | |
| **10.** ಸದಸ್ಯರಿಗೆ ಪರಿಕರಗಳ ಪೂರೈಕೆ   | | | |
| **11.** ಸದಸ್ಯರಿಂದ ಉತ್ಪನ್ನಗಳ ಖರೀದಿ   | | | |
| **12.** ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ನೇಮಕಾತಿ  | | | |
| **13.** ರೈತ ಉತ್ಪಾದಕ ಸಂಸ್ಥೆಗಳ ನೀತಿಗಳನ್ನು ರೂಪಿಸುವುದು   | | | |

# ಸದಸ್ಯರ ಸ್ವಯಂ ಮೌಲ್ಯ ಮಾಪನ

ರೈತ ಉತ್ಪಾದಕ ಸಂಸ್ಥೆಯಲ್ಲಿ ನಮ್ಮ ನಮ್ಮ ಪಾತ್ರಗಳು ಹಾಗೂ ಜವಾಬ್ದಾರಿಗಳ ಅನುಸಾರ ನಮ್ಮ ಮೌಲ್ಯ ಮಾಪನವನ್ನು ನಾವೇ ಮಾಡಿಕೊಳ್ಳೋಣ. ಅದರ ಮುಖಾಂತರ ನಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನಾವು ಎಷ್ಟರಮಟ್ಟಿಗೆ ಸಮರ್ಥರಾಗಿದ್ದೇವೆ. ಎಂದು ಕಂಡುಕೊಳ್ಳೋಣ. ಯಾವುದಾರೂ ನ್ಯೂನ್ಯತೆಗಳಿದರೆ ಅವುಗಳಲ್ಲಿ ಸುಧಾರಣೆ ತಂದುಕೊಂಡು ಪೂರ್ಣ ಪ್ರಮಾಣದಲ್ಲಿ ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬಹುದಾದಿಗೆ.



# ಕಲಿಕಾ ಸಾಮಾಗ್ರಿಗಳು

**ಕಂಪನಿಗಳ ಕಾಯ್ದೆ 2013**

ಕಂಪನಿಯ ಸದಸ್ಯರ ಅಧಿಕಾರ – ಸದಸ್ಯರು ಸರ್ವಸದಸ್ಯರ ಸಾಮಾನ್ಯ ಸಭೆಯ ಮೂಲಕ ಕಾರ್ಯನಿರ್ವಹಿಸುತ್ತಾರೆ ಮತ್ತು ಸಾಮಾನ್ಯ ಸಭೆಗೆ ಮಾತ್ರ ಈ ಕೆಳಗಿನ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವಿರುತ್ತದೆ;

1) ಆಯವ್ಯಯದ ಅನುಮೋಧನೆ ಮತ್ತು ಕಂಪನಿಯ ವಾರ್ಷಿಕ ಖಾತೆಗಳನ್ನು ಅಳವಡಿಸಿಕೊಳ್ಳುವುದು.
2) ತಡೆಹಿಡಿಯಲಾದ ಬೆಲೆಯ ಪ್ರಮಾಣವನ್ನು ಅನುಮೋದಿಸುವುದು
3) ಪ್ರೋತ್ಸಾಹಕ ಬೋನಸ್‌ಅನ್ನು ಅನುಮೋದಿಸುವುದು
4) ಹೆಚ್ಚುವರಿ ಬೋನಸ್ ಷೇರುಗಳ ವಿತರಣೆಯನ್ನು ಅಧಿಕೃತಗೊಳಿಸುವುದು
5) ಲೆಕ್ಕಪರಿಶೋಧಕರನ್ನು ನೇಮಿಸುವುದು
6) ಲಾಭಾಂಶವನ್ನು ಘೋಷಿಸಿವದು ಮತ್ತು ಸದಸ್ಯರಿಗೆ ವಿತರಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು
7) ಎಮ್‌ಓಮ್ ಮತ್ತು ಎಓಎ ಗಳ ತಿದ್ದುಪಡಿ
8) ಯಾವುದೇ ನಿರ್ದೇಶಕರಿಗೆ ಮಂಡಳಿಯ ನೀಡಬಹುದಾದ ಸಾಲಗಳ ಷರತ್ತುಗಳು ಮತ್ತು ಮಿತಿಗಳನ್ನು ನಿರ್ದಿಷ್ಟಪಡಿಸಿವುದು
9) ಎಓಎನಲ್ಲಿ ಸದಸ್ಯರ ನಿರ್ಧಾರಕ್ಕಾಗಿ ನಮೂದಿಸಿರುವ ಇನ್ನಿತರ ಯಾವುದೇ ವಿಷಯಗಳ ಅನುಮೋದನೆ.

## ಮಂಡಳಿಯ ಅಧಿಕಾರಗಳು ಮತ್ತು ಹೊಣೆಗಾರಿಕೆ (ಕಂಪನಿ ಕಾಯ್ದೆ 2013)

1. ಪಾವತಿಸಬೇಕಾದ ಲಾಭಾಂಶದ ನಿರ್ಣಯ
2. ತಡೆಹಿಡಿಯಲಾದ ಬೆಲೆಯ ಪ್ರಮಾಣವನ್ನು ನಿರ್ಧರಿಸುವುದು ಮತ್ತು ಪ್ರೋತ್ಸಾಹಕ ಬೋನಸ್ ನೀಡುವ ಬಗ್ಗೆ ಅನುಮೋಧಿಸಲು ಸಾಮಾನ್ಯ ಸಭೆಗೆ ಶೀಫಾರಸ್ಸು ಮಾಡುವುದು.
3. ಹೊಸ ಸದಸ್ಯರ ದಾಖಲಾತಿ
4. ಸಂಸ್ಥೆಯ ಸಾಂಸ್ಥಿಕ ನೀತಿಗಳು, ಉದ್ದೇಶಗಳು, ನಿರ್ದಿಷ್ಟವಾದ ಧೀರ್ಘಕಾಲೀನ ಮತ್ತು ವಾರ್ಷಿಕ ಗುರಿಗಳನ್ನು ನಿಗಧಿಪಡಿಸುವುದು ಹಣಕಾಸಿನ ಯೋಜನೆಗಳನ್ನು ಹಾಗೂ ಸಂಸ್ಥೆಯ ಕಾರ್ಪೋರೇಟ್ ಕಾರ್ಯತಂತ್ರಗಳಿಗೆ ಅನುಮೋಧನೆ ನೀಡುವುದು.
5. ಎಓಎ ನಲ್ಲಿ ನಿರ್ದಿಷ್ಟ ಪಡಿಸಿದಂತೆ ಮುಖ್ಯಕಾರ್ಯನಿರ್ವಣಾಧಿಕಾರಿ ಮತ್ತು ಉತ್ಪಾದಕ ಕಂಪನಿಯ ಇತರ ಅಧಿಕಾರಿಗಳನ್ನು ನೇಮಕ ಮಾಡುವುದು.
6. ಆಡಳಿತ ಮಂಡಳಿಯಿಂದ ನೇಮಿಸಲ್ಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಇತರೆ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಕಾರ್ಯನಿರ್ವಹಣೆಯಲ್ಲಿ ಮಾರ್ಗದರ್ಶನ ನೀಡುವುದು.
7. ಸಂಸ್ಥೆಯ ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ವಾರ್ಷಿಕ ವರಧಿ ತಯಾರಿಸುವುದು, ಲೆಕ್ಕಪರಿಶೋಧನೆ ಮಾಡಿಸುವುದು, ಲೆಕ್ಕಪರಿಶೋಧಕರು ನ್ಯೂನ್ಯತೆಗಳನ್ನು ಗುರುತಿಸಿದ್ದರೆ ಅವುಗಳನ್ನು ಸರಿಪಡಿಸಿಕೊಂಡು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋಧನೆ ಪಡೆಯುವುದನ್ನು ಖಾತರಿಪಡಿಸಿಕೊಳ್ಳುವುದು.
8. ಸಂಸ್ಥೆಯ ವ್ಯವಹಾರವನ್ನು ನಿರ್ವಹಿಸುವಾಗ ಕಂಪನಿಯ ಸ್ವತ್ತುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಮತ್ತು ವಿಲೇವಾರಿ ಮಾಡುವುದು
9. ಕಂಪನಿಯ ಸಂಪನ್ಮೂಲಗಳನ್ನು ಹೂಡಿಕೆ ಮಾಡುವುದು.
10. ಕಂಪನಿಯ ವ್ಯವಹಾರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರು ಅಥವಾ ಅವರ ಸಂಬಂಧಿಕರಿಗೆ ಹೊರತುಪಡಿಸಿ ಮುಂಗಡ ಅಥವಾ ಸಾಲವನ್ನು ಮಂಜೂರು ಮಾಡುವುದು.
11. ಕರ್ತವ್ಯಗಳನ್ನು ನಿರ್ವಹಿಸಲು ಬೇಕಾಗಿರುವ ಇನ್ನಾವುದೇ ಕ್ರಮ ತೆಗೆದುಕೊಳ್ಳುವದು ಹಾಗೂ ಅಧಿಕಾರ ಚಲಾಯಿಸುವದು.

## ಪರಸ್ಪರ ಸಹಾಯದ ಸಹಕಾರಿ ಕಾಯ್ದೆ 1995 (ಎಮ್ ಎ ಸಿ ಎಸ್ ಕಾಯ್ದೆ 1995) ಆಡಳಿತ ಮಂಡಳಿಯ ಅಧಿಕಾರಿಗಳು ಮತ್ತು ಕರ್ತವ್ಯಗಳು

ಆಡಳಿತ ಮಂಡಳಿಯ ಬೈಲಾಗಳ ಅನುಗುಣವಾಗಿ ಕೆಳಗಿನ ಅಧಿಕಾರವನ್ನು ಹೋಂದಿರುತ್ತದೆ

1. ಸದಸ್ಯತ್ವವನ್ನು ನೀಡುವುದು ಮತ್ತು ಸದಸ್ಯತ್ವದಿಂದ ತೆಗೆದುಹಾಕುವುದು
2. ಅಧ್ಯಕ್ಷರನ್ನು ಮತ್ತು ಇತರ ಪಧಾಧಿಕಾರಿಗಳನ್ನು ಆಯ್ಕೆ ಮಾಡುವದು
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಹಾಗೂ ಇತರೆ ಸಿಬ್ಬಂದಿಗಳನ್ನು ನೇಮಿಸುವುದು ಮತ್ತು ತೆಗೆದುಹಾಕುವುದು
4. ಸಿಬ್ಬಂದಿಗಳ ಪ್ರಮಾಣವನ್ನು ನಿರ್ದಿಷ್ಟಪಡಿಸುವುದು
5. ಸಂಸ್ಥೆಗೆ ಸಂಬಂಧಿಸಿದ ನೀತಿಗಳನ್ನು ರಚನೆ ಮಾಡುವುದು;
   - i. ಸದಸ್ಯರಿಗೆ ಸೇವೆಗಳನ್ನು ಒದಗಿಸುವುದು
   - ii. ಸಹಕಾರಿ ಸಂಘದಲ್ಲಿ ಸಿಬ್ಬಂದಿಗಳ ನೇಮಕಾತಿ ಮತ್ತು ಅವರ ಸೇವೆಗಳ ಷರತ್ತುಗಳನ್ನು ರೂಪಿಸುವುದು
   - iii. ಸಂಸ್ಥೆಯ ಹಣಕಾಸಿನ ಸೂಪರ್ಧಿ ಮತ್ತು ಹೂಡಿಕೆ
   - iv. ಸಂಸ್ಥೆಯ ಖಾತೆಗಳ ನಿರ್ವಹಣೆ ವಿಧಾನವನ್ನು ಅಂತಿಮಗೊಳ್ಳಿಸುವುದು.
   - v. ವಿವಿಧ ನಿಧಿಗಳನ್ನು ಕ್ರೋಡಿಕರಿಸುವುದು, ಬಳಸಿಕೊಳ್ಳುವುದು ಮತ್ತು ಹೂಡಿಕೆ ಮಾಡುವುದು.
   - vi. ಮೇಲ್ವಿಚಾರಣೆ ಮತ್ತು ಮಾಹಿತಿ ನಿರ್ವಹಣ ವ್ಯವಸ್ಥೆಗಳ ನಿರ್ವಹಣೆ ಮತ್ತು ವಾರ್ಷಿಕವಾಗಿ ಶಾಸನ ಬದ್ಧ ಸಲ್ಲಿಕೆಗಳು
   - vii. ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯವಿರುವ ಇತರೆ ಕ್ರಮಗಳು
6. ವಾರ್ಷಿಕ ವರದಿ, ವಾರ್ಷಿಕ ಹಣಕಾಸು ವರದಿ ಮತ್ತು ವಾರ್ಷಿಕಯೋಜನೆಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋಧನೆ ಪಡೆದುಕೊಳ್ಳುವುದು
7. ವಾರ್ಷಿಕ ಲೆಕ್ಕ ಪರಿಶೋಧನೆ ವರದಿ ಮತ್ತು ಪಾಲಿಸಬೇಕಾದ ಕಾನೂನು ಅನುಸರಣೆ ವರದಿಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳುವುದು
8. ಇತರೆ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುವುದು ಹಾಗೂ ಸದಸ್ಯತ್ವವನ್ನು ಮರುಪರಿಶೀಲಿಸುವುದು
9. ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದ ಇತರ ಕೆಲಸಗಳನ್ನು ಕೈಗೋಳ್ಳುವುದು

**ಕಂಪನಿಗಳ ಕಾಯ್ದೆ 2013: ನಿರ್ದೇಶಕ ಮಂಡಳಿಯ ಹೊಣೆಗಾರಿಕೆ**

1.ಆಡಳಿತ ಮಂಡಳಿಯ ಮತ ಚಲಾಯಿಸುವ ಅಥವಾ ಇನ್ನಾವುದೇ ರೀತಿಯಿಂದ ಕಂಪನಿಯ ನಿಬಂಧನೆಗಳ ವಿರುದ್ಧವಾಗಿ/ ವಿರೋಧಭಾಸವಾಗಿ ಯಾವುದಾದರು ನಿರ್ಣಯಗಳನ್ನು ತೆಗೆದುಕೊಂಡಿದ್ದರೆ, ಆ ನಿರ್ಣಯದಿಂದ ಕಂಪನಿಗೆ ಆದ ಯಾವುದೇ ನಷ್ಟ ಅಥವಾ ಹಾನಿಯನ್ನು ಸರಿದುಗಿಸುವ ಹೊಣೆಗಾರಿಕೆಯು ಆಡಳಿತ ಮಂಡಳಿಯ ಸದಸ್ಯರದ್ದಾಗಿರುತ್ತದೆ.

2.ಯಾವುದೇ ಪೂರ್ವಗ್ರಹವಿಲ್ಲದೆ ನಿಬಂಧನೆಗಳ ಉಪವಿಭಾಗ (1) ರ ಅನುಸಾರ ಉತ್ಪಾದಕ ಕಂಪನಿಯ ಆಡಳಿತ ಮಂಡಳಿಯ ಸದಸ್ಯ/ಸದಸರಿಂದ ವಸೂಲಿ ಮಾಡಬಹುದಾಗಿದೆ.

ಅ) ಉಪ–ವಿಭಾಗ (1) ರಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳ ಉಲ್ಲಂಘನೆಯ ಪರಿಣಾಮವಾಗಿ ನಿರ್ದೇಶಕ/ನಿರ್ದೇಶಕರು ಗಳಿಸಿದ ಸಮಾನವಾದ ಮೊತ್ತ.

ಆ)ಉಪ ವಿಭಾಗ (1) ರಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳ ಉಲ್ಲಂಘನೆಯ ಪರಿಣಾಮವಾಗಿ ಕಂಪನಿಯು ಅನುಭವಿಸಿದ ನಷ್ಟದ ಸಮಾನವಾದ ಮೊತ್ತ.

3.ಈ ವಿಭಾಗದ ಅಡಿಯಲ್ಲಿ ವಿಧಿಸಲಾಗಿರುವ ಮೊತ್ತದ ಹೊರತಾಗಿಯು ಕಾಯ್ದೆಯಡಿ ಅಥವಾ ಇತರೆ ಇನ್ನಾವುದೆ ಕಾನೂನಿನಡಿಯಲ್ಲಿ ವಿಧಿಸಬಹುದಾದ ದಂಡದ ಮೊತ್ತ.

## ಅಧ್ಯಕ್ಷರ ಪಾತ್ರಗಳು ಮತ್ತು ಜವಾಬ್ದಾರಿಗಳು

1.ಸಾಮಾನ್ಯ ಮತ್ತು ವಿಶೇಷ ಸಭೆಗಳ ಅಧ್ಯಕ್ಷತೆಯನ್ನು ವಹಿಸಿವುದು ಮತ್ತು ಸಭೆಯ ಕಾರ್ಯಕಲಾಪಗಳ ಮೇಲ್ವಿಚಾರಣೆ

2.ಮಾರ್ಗಸೂಚಿಗಳ ಪ್ರಕಾರ ರೈತ ಉತ್ಪಾದಕ ಸಂಸ್ಥೆ ಕಾರ್ಯಚರಣೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅದರ ಬಗ್ಗೆ ಯಾವಾಗಲು ಜಾಗೃತರಾಗಿದ್ದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

3.ಸದಸ್ಯರ ಸಾಮಾನ್ಯ ಮತ್ತು ವಿಶೇಷ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಜಾರಿಗೊಳಿಸಬೇಕು.

4.ಆಡಳಿತ ಮಂಡಳಿಯಲ್ಲಿ ತೆಗೆದುಕೊಳ್ಳುವ ನಿರ್ಧಾರಗಳನ್ನು ಜಾರಿಗೊಳಿಸಬೇಕು.

5.ಕಾನೂನು ಅನುಸರಣೆ ಸೇರಿದಂತೆ ರೈತ ಉತ್ಪಾದಕ ಸಂಸ್ಥೆ ಎಲ್ಲ ವಿಷಯಗಳ ಬಗ್ಗೆ ಮೇಲ್ವಿಚಾರಣೆ

6.ರೈತಉತ್ಪಾದಕ ಸಂಸ್ಥೆ ಸಿಬ್ಬಂದಿಯನ್ನು ಮೇಲ್ವಿಚಾರಣೆ ಮಾಡುವುದು.

7. ರೈತ ಉತ್ಪಾದಕ ಸಂಸ್ಥೆಗಳ ಪ್ರಗತಿಯ ದೃಷ್ಟಿಯಿಂದ ಯೋಜನೆಗಳನ್ನು ಜಾರಿಗೊಳಿಸುವ ಕ್ರಮಗಳನ್ನು ಸಿದ್ಧಪಡಿಸುವುದು.

8.ರೈತ ಉತ್ಪಾದಕ ಸಂಸ್ಥೆಯನ್ನು ಹೊರಗಿನ ಜಗತ್ತಿನಲ್ಲಿ ಪ್ರತಿನಿಧಿಸುವುದು.

9.ರೈತ ಉತ್ಪಾದಕ ಸಂಸ್ಥೆಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿ ನಿರ್ವಹಣೆ ಮಾಡುವುದು.

10.ಕಾರ್ಯದರ್ಶಿ ಮೂಲಕ ಸದಸ್ಯರ ಹಾಗೂ ಸಿಬ್ಬಂದಿಗಳ ದೂರುಗಳನ್ನು ಬಗ್ಗೆ ತಿಳಿದುಕೊಂಡು ಅವುಗಳನ್ನು ಪರಿಹರಿಸುವ ಸಲುವಾಗಿ ನಿರ್ಧಾರಗಳನ್ನು ಮತ್ತು ಕ್ರಮಗಳನ್ನು ತೆಗೆದುಕೊಳ್ಳುವುದು.

11 ರೈತ ಉತ್ಪಾದಕ ಸಂಸ್ಥೆಗಳ ಹಿತಾಸಕ್ತಿಗಳನ್ನು ಕಾಪಾಡುವುದು ಮತ್ತು ಅದರ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ನಿರ್ವಹಿಸುವುದು

**ಕಾರ್ಯದರ್ಶಿಯ ಪಾತ್ರಗಳು ಮತ್ತು ಜವಾಬ್ದಾರಿಗಳು**

1.ರೈತ ಉತ್ಪಾದಕ ಸಂಸ್ಥೆ ನೀಡುವ ಎಲ್ಲಾ ರಶೀದಿಗಳು, ದಾಖಲೆಗಳು ಮತ್ತು ಇತರೆ ಪ್ರಮಾಣ ಪತ್ರಗಳ ಅಧಿಕೃತ ಸಹಿಗಾರರಾಗಿ ಸಹಿ ಮಾಡುವುದು.

2.ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಗಳು, ವಿಶೇಷ ಸಭೆಗಳು, ಆಡಳಿತ ಮಂಡಳಿಯ ಸಭೆಗಳು, ಉಪ ಸಮಿತಿಯ ಸಭೆಗಳ ಮತ್ತು ಇತರೆ ಸಭೆಗಳನ್ನು ಕರೆಯವುದು ಸಭೆಗಳಲ್ಲಿ ಹಾಜರಾತಿ ತೆಗೆದುಕೊಳ್ಳುವುದು, ನಡಾವಳಿಗಳನ್ನು ದಾಖಾಲಿಸುವುದು, ಅಧ್ಯಕ್ಷರ ಸಹಿ ಪಡೆದು ಸಂಬಂಧಪಟ್ಟವರಿಗೆ ತಲುಪಿಸುವುದು ಮತ್ತು ನಿರ್ಣಯಗಳನ್ನು ಅನುಷ್ಠಾನಗೊಳಿಸುವುದು.

3.ಮೇಲ್ವಿಚಾರಣೆ ನಡೆಸುವುದು, ಸಮಯೋಚಿತವಾಗಿ ಕಾನೂನು ಅನುಸರಣೆಗಳನ್ನು ಖಚಿತಪಡಿಸಿಕೊಳ್ಳುವುದು.

4.ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಗೆ ಹಾಗೂ ಕಾನೂನು ಮತ್ತು ನಿಯಂತ್ರದ ಪ್ರಾಧಿಕಾರಗಳಿಗೆ ಅಗತ್ಯವಿರುವ ಮಾಹಿತಿಗಳನ್ನು ಕಲೆ ಹಾಕುವುದು ಮತ್ತು ಒದಗಿಸುವುದು.

5.ತೆಗೆದುಕೊಳ್ಳುವ ಕ್ರಮಗಳು ಹಾಗೂ ವಹಿವಾಟುಗಳಲ್ಲಿ ರೈತ ಉತ್ಪಾದಕ ಸಂಸ್ಥೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು.

**ಮುಖ್ಯಕಾರ್ಯನಿರ್ವಣಾಧಿಕಾರಿಯ ಕಾರ್ಯಗಳು (ಕಂಪನಿಗಳ ಕಾಯ್ದೆ 2013)**

1. ಉತ್ಪಾದ ಕಂಪನಿಯ ದಿನ ನಿತ್ಯದ ವ್ಯವಹಾರಗಳನ್ನು ನಿರ್ವಹಿಸುವುದು ಸೇರಿದಂತೆ ದಿನ ನಿತ್ಯದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುವುದು.
2. ಸ್ವತಹ ಅಥವಾ ಆಡಳಿತ ಮಂಡಳಿಯು ಗುರುತಿಸಿದ ವ್ಯಕ್ತಿಯ ಮುಖಾಂತರ ಬ್ಯಾಂಕ್ ಖಾತೆಯನ್ನು ನಿರ್ವಹಿಸುವುದು.
3. ಕಂಪನಿಯ ನಗದು ಹಣ ಮತ್ತು ಇತರೆ ಸ್ವತ್ತುಗಳನ್ನು ಸುಕರಕ್ಷಿತವಾಗಿಡಲು ವ್ಯವಸ್ಥೆ ಮಾಡುವುದು.
4. ಆಡಳಿತ ಮಂಡಳಿಯಿಂದ ಅಧಿಕೃತವಾದ ಅನುಮೋದನೆ ಪಡೆದು ಕಂಪನಿಯ ಪರವಾಗಿ ಕೆಲವು ದಾಖಲೆಗಳಿಗೆ ಸಹಿ ಮಾಡುವುದು.
5. ಲೆಕ್ಕ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಿ ವಾರ್ಷಿಕ ಖಾತೆಗಳನ್ನು ಸಿದ್ಧಪಡಿಸಿ ಮತ್ತು ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋದನೆ ಮಾಡಿಸಿ ಅವುಗಳಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೊದನೆ ಪಡೆಯುವುದು.
6. ಉತ್ಪಾದಕ ಕಂಪನಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಕಾಲಕಾಲಕ್ಕೆ ಸದಸ್ಯರಿಗೆ ಮಾಹಿತಿ ನೀಡುವುದು.
7. ಆಡಳಿತ ಮಂಡಳಿ ನೀಡಿರುವ ಅಧಿಕಾರದ ಅನುಗುಣವಾಗಿ ಅನುಮೋಧಿತ ನೇಮಕಾತಿಗಳನ್ನು ಮಾಡಿಕೊಳ್ಳುವುದು.
8. ರೈತ ಉತ್ಪಾದಕ ಸಂಸ್ಥೆಗಳ ಗುರಿಗಳು, ಉದ್ದೇಶಗಳು, ಕಾರ್ಯತಂತ್ರಗಳು ಯೋಜನೆಗಳು ಮತ್ತು ನೀತಿಗಳನ್ನು ರೂಪಿಸುವಲ್ಲಿ ಆಡಳಿತ ಮಂಡಳಿಗೆ ಸಹಾಯ ಮಾಡುವುದು.
9. ಪ್ರಸ್ತುತ ಕೈಗೊಂಡಿರುವ ಹಾಗೂ ಪ್ರಾಸ್ತಾವಿತ ಚಟುವಟಿಕೆಗಳಿಗೆ ಸಂಬಂಧಿಸಿದ ಕಾನೂನು ಅನೂಸರಣೆಗಳನ್ನು ಪಾಲಿಸುವುದರ ಜೋತೆಗೆ ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಸಲಹೆ ಮತ್ತು ಮಾರ್ಗದರ್ಶನ ನೀಡುವುದು ಹಾಗೂ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.
10. ದೈನಂದಿನ ವ್ಯವಹಾರಗಳಲ್ಲಿ ಅಗತ್ಯವಾದ ಅಧಿಕಾರಗವನ್ನು ಚಲಾಯಿಸುವುದು.
11. ಆಡಳಿತ ಮಂಡಳಿಯಿಂದ ನಿಯೋಜಿಸ ಬಹುದಾದಂತಹ ಇತರ ಕಾರ್ಯಗಳನ್ನು ನಿರ್ವಹಿಸಿಸುವುದು.

# ಅಂತಿಮ ಸಮೀಕ್ಷೆ

ಈಣ ನಾವು "ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸದ" ಕುರಿವಾದ ಕೈಪಿಡಿಯ ಅಂತಿಮ ಹಂತಕ್ಕೆ ಬಂದಿದ್ದೇವೆ. ನಾವು ನೆನಸಿಕೊಳ್ಳುವುದಾರೆ ಆರಂಭದಲ್ಲಿ ನಾವು ರೈತ ಉತ್ಪಾದಕ ಸಂಸ್ಥೆಗಳ ರಚನೆಯ ಬಗ್ಗೆ ಮೂಲ ಪ್ರಶ್ನೆಗಳಿಗೆ ಉತ್ತಮವಾಗಿ ಉತ್ತರಿಸಿದ್ದಿರಿ. ಈಗ ಕಲಿಕೆಯ ಅಂತಿಮದಲ್ಲಿ ನಮ್ಮ ಅರ್ಥೈಸಿಕೊಳ್ಳುವಿಕೆಯನ್ನು ಮೌಲ್ಯಮಾಪನ ಮಾಡಲು ಅಂತಿಮ ಸಮೀಕ್ಷೆ ಮಾಡೋಣ.

1 ಸಾಮಾನ್ಯ ಸಭೆಯ ಅಧಿಕಾರಗಳು ಮತ್ತು ಕಾರ್ಯಗಳು ಯಾವುವು?

--------------------------------------------------------------------------------

--------------------------------------------------------------------------------

2 ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರಿಗೆ ಯಾರು ಸೇವೆಗಳನ್ನು ಒದಗಿಸಬೇಕು?

--------------------------------------------------------------------------------

--------------------------------------------------------------------------------

3 ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಹೊಣೆಗಾರಿಕೆಗಳು ಯಾವುವು?

--------------------------------------------------------------------------------

--------------------------------------------------------------------------------

4 ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ನಡುವಿನ ಪಾತ್ರಗಳ ವ್ಯತ್ಯಾಸವೇನು?

--------------------------------------------------------------------------------

--------------------------------------------------------------------------------

**ರೈತ ಉತ್ಪಾದಕ ಸಂಸ್ಥೆಯ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ ಸಾಂಸ್ಥಿಕ ರಚನೆ ಮತ್ತು ವಿನ್ಯಾಸದ ಈ ಕೈಪಿಡಿಯಿಂದ ನಮ್ಮ ರೈತ ಉತ್ಪಾದಕ ಸಂಸ್ಥೆಗಳಿಗೆ ನೆರವಾಗುವ ಪ್ರಮುಖ ಕ್ರಿಯಾ ಅಂಶಗಳು ಯಾವುವು ಎಂದು ಬರೆಯೋಣ.**

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

# ಗ್ರಂಥ ಋಣ


1. "ಪರಿಕಲ್ಪನ" – ಇನ್ಸಿಟ್ಯೂಷನಲ್ ಸ್ಟ್ರಕ್ಚರ್ ಎಂಡ್ ಡಿಸೈನ್ ಆಫ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್– ಮಹಿಳಾ ಅಭಿವೃದ್ಧಿ ಸೊಸೈಟಿ, ಮಣಿಕೊಂಡ ಹೈದ್ರಾಬಾದ್, ತೆಲಂಗಾಣ ದಿಂದ ಪ್ರಕಟವಾದ ತರಬೇತಿ ಕೈಪಿಡಿ – 2019

2. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ಕಾನೂನಾತ್ಮಕ ಅನುಸರಣೆಗಳು – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

3. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ರೈತ ಉತ್ಪಾದಕ ಸಂಸ್ಥೆಗಳ ಒಳಿದು ಅವಲೋಕನ – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

4. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ –ರೈತ ಉತ್ಪಾದಕ ಸಂಸ್ಥೆಗಳ ವ್ಯವಹಾರ ಯೋಜನೆ– ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.


5. ಅಶೋಕ ಎಸ್. ಆಲೂರ ಹಾಗೂ ಇತರರು – ಫಾರ್ಮರ್ ಪ್ರೋಡ್ಯೂಸರ್ ಆರ್ಗನೈಜೇಷನ್ಸ್ * ಆ್ಯನ್ ಇನ್ನೋವೇಟಿವ್ ಇನ್ಸಿಟ್ಯೂಷನಲ್ ಅಪ್ರೋಚ್ ಫಾರ್ ಕಲೆಕ್ಟಿವ್ ಆ್ಯಕ್ಷನ್ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ನಬಾರ್ಡ್‌ನ ಪ್ರಕಟಣೆ – 2017.


6. ಆಲೂರ.ಎ.ಎಸ್., ರವೀಂದ್ರರ ರೆಡ್ಡಿ ಸಿ.ಎಚ್., ಗೌಡಾ ಸಿ.ಎಲ್. ಎಲ್. ರೆಡ್ಡಿ ಬಿ. ವ್ಹಿ., ರಾಯ್ ಕೆ.ಎನ್., ಪಾರ್ಥಸಾರಥಿ ರಾವ್ ಪಿ. ಹಾಗೂ ಸುನೀಲಕುಮಾರ ಎಸ್. (2008)ಬಿಲ್ಡಿಂಗ್ ಸ್ಟ್ರಾಂಗರ್ ಫಾರ್ಮರ್ಸ್ ಅಸೋಸಿಯೇಶನ್ಸ್, ಬೆಳೆ ಸುಧಾರಣೆ ಜಾಗತಿಕ ವಿಭಾಗ, ಅಂತರರಾಷ್ಟ್ರೀಯ ಅರೆಶುಷ್ಕ ಉಷ್ಣವಲಯಗಳ ಬೆಳೆ ಸಂಶೋಧನಾ ಕಂಪನಿ, ಪಟನ್‌ಚೆರು–502324, ಆಂಧ್ರಪ್ರದೇಶ.32 ಪುಟಗಳು

7. ಕಾರ್ಮನ್,ಕೆ ಹಾಗೂ ಕೆಇಥ್ ಕೆ (1994). ಕಮ್ಯುನಿಟಿ ಕನಸಲ್ಟೇಶನ್ ಟೆಕ್‌ನಿಕ್ಸ್; ಪರಪೋಸಿಸ್, ಫ್ರೊಸೆಸಿಸ್ ಅಂಡ್ ಪಿಟ್‌ಫಾಲ್ಸ್–ಎ ಗೈಡ್ ಫಾರ್ ಪ್ಲಾನರ್ಸ್ ಆಂಡ್ ಫೆಸಿಲಿಟೇಬರ್ಸ್ ಬ್ರಿಸೇಬೇನ್, ಡಿಪಾರ್ಟಮೆಂಟ್ ಆಫ್  ಪ್ರೈಮರಿ ಇಂಟಸ್ಟ್ರೀಸ್, ಕ್ವಿನ್ಸ್‌ಲ್ಯಾಂಡ್.

8. ಚಾಮಲಾ.ಎಸ್ (1990). ಎಸ್ಟ್ಯಾಬ್ಲಿಸಿಂಗ್ ಎ–ಗ್ರೂಪ್; ಎ ಪಾರ್ಟಿಸಿಪೇಟಿವ್ಹ್ ಆಕ್ಷನ್ ಮಾಡಲ್ ಇನ್ ಎಸ್.ಚಾಮಲಾ ಮತ್ತು ಪಿ.ಡಿ. ಮಾರ್ಟನ್, ವರ್ಕಿಂಗ್ ಟುಗೆದರ್ ಫಾರ್ ಲ್ಯಾಂಡ್‌ಕೇರ್; ಗ್ರೂಪ್ ಮ್ಯಾನೇಜ್‌ಮೆಂಟ್ ಸ್ಕಿಲ್ಸ್ ಆಂಡ್ ಸ್ಟ್ರೆಟಜೀಸ್,ಪುಟಸಂಖ್ಯೆ 13–28, ಬ್ರಿಸ್‌ಬೇನ್, ಆಸ್ಟ್ರೇಲಿಯನ್ ಅಕಾಡೆಮಿ ಪ್ರೆಸ್.

# ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ
# ರೈತ ಉತ್ಪಾದಕ ಸಂಸ್ಥೆಗಳ ಗುಣಲಕ್ಷಣಗಳು







## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

ರಾಜ್ಯ ಮಟ್ಟದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಬೆಂಬಲ ಹಾಗೂ ಸಹಾಯ ನೀಡುವ ನಿಟ್ಟಿನಲ್ಲಿ ಒಂದು ಸಾಂಸ್ಥಿಕ ರಚನೆಯ ಅರಿವನ್ನು ಮನಗಂಡು ಕರ್ನಾಟಕ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ಈ ಸಂಸ್ಥೆಯು ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ, ವ್ಯವಹಾರ ಅಭಿವೃದ್ಧಿ ಸಂಬಂಧ ಪಟ್ಟಂತೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೆಂಬಲ ಮತ್ತು ಸಹಕಾರ ನೀಡುವ ಮೂಲಕ ಈ ಸಂಸ್ಥೆಗಳ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ.

# ಪರಿಕಲ್ಪನ – ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ




## ಮಹಿಳಾ ಅಭಿವೃದ್ಧಿ ಸೊಸೈಟಿ – ಆಂಧ್ರ ಪ್ರದೇಶ (ಎಪಿಎಮ್‌ಎಎಸ್)

ಎಪಿಎಮ್‌ಎಎಸ್ ಒಂದು ರಾಷ್ಟ್ರ ಮಟ್ಟದ ಸರ್ಕಾರೇತರ ಸಂಪನ್ಮೂಲ ಸಂಸ್ಥೆಯಾಗಿದ್ದು ಸಂಸ್ಥೆಯು ಜನರ ಸಹಭಾಗಿತ್ವದ ಸಂಸ್ಥೆಗಳಾದ ಸ್ವಸಹಾಯ ಸಂಘಗಳು, ಸ್ವಸಹಾಯ ಸಂಘಗಳ ಒಕ್ಕೂಟಗಳು, ಸಹಕಾರಿ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಇತರೆ ಸಮುದಾಯ ಆಧಾರಿತ ಗುಂಪುಗಳ ಏಳಿಗೆಗಾಗಿ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆಗಳು ಸ್ವಸಹಾಯ, ಪರಸ್ಪರ ಲಾಭ, ಅವರದೆ ಆದ ಜವಾಬ್ದಾರಿ ಹಾಗೂ ಸ್ವಾವಲಂಭನೆಯ ಮೌಲ್ಯಗಳನ್ನು ಆಧಾರದ ಮೇಲೆ ಕಾರ್ಯನಿರ್ವಹಿಸುವಂತಹ ಸಂಸ್ಥೆಗಳಾಗಿವೆ.

ವಿನ್ಯಾಸ ಮತ್ತು ಮುದ್ರಣ: ಇಂಡಿಗೋ ಮಲ್ಟಿಮೀಡಿಯಾ, ಬೆಂಗಳೂರು (9738181827)